## ಮಂಗಳವಾರ, ೧೧ನೇ ಡಿಸೆಂಬರ್, ೧೯೪೬

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ, ತಾತ್ಕಾಲಿಕ ಅಧ್ಯಕ್ಷರ (ಡಾ. ಸಚ್ಚಿದಾನಂದ ಸಿನ್ಹ) ಅಧ್ಯಕ್ಷತೆಯಲ್ಲಿ ಬೆಳಗ್ಗೆ ೧೧ ಗಂಟೆಗೆ ಸಭೆ ಸೇರಿತು.

**ಮಾನ್ಯ ಅಧ್ಯಕ್ಷರು** (ಡಾ ಸಚ್ಚಿದಾನಂದ ಸಿನ್ಹ) : ಗೌರವಾನ್ವಿತ ಸದಸ್ಯರು ಯಾರಾದರೂ ನಿನ್ನೆಯ ಅಪರಾಹ್ನದ ಅನಂತರ ಆಗಮಿಸಿದ್ದರೆ, ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿಲ್ಲದಿದ್ದರೆ ಅಥವಾ ಪರಿಚಯ ಪತ್ರಗಳನ್ನು ಸಲ್ಲಿಸಿಲ್ಲದಿದ್ದರೆ, ಈಗ ಅದನ್ನು ಮಾಡಬಹುದು.

(ಯಾರೂ ಮುಂದೆ ಬರಲಿಲ್ಲ)

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈಗ ನಾನು ಎರಡನೆಯ ವಿಷಯವನ್ನು ಕೈಗೆತ್ತಿಕೊಳ್ಳುತ್ತೇನೆ. ಅದೆಂದರೆ ಒಬ್ಬ ಶಾಶ್ವತ ಅಧ್ಯಕ್ಷರನ್ನು ಚುನಾಯಿಸುವುದಕ್ಕೆ ಸಂಬಂಧಿಸಿದ ಕಾರ್ಯವಿಧಾನವನ್ನು ನಿಗದಿ ಪಡಿಸುವ ನಿರ್ಣಯವನ್ನು ಮಂಡಿಸುವುದು. ಆಚಾರ್ಯ ಕೃಪಲಾನಿ ಅವರು ಈ ನಿರ್ಣಯವನ್ನು ಮಂಡಿಸುತ್ತಾರೆ ಎಂದು ಭಾವಿಸಿದ್ದೇನೆ. ಅದನ್ನು ಮಂಡಿಸಲು ಅವರನ್ನು ಆಹ್ವಾನಿಸುತ್ತೇನೆ.

### ಶಾಶ್ವತ ಅಧ್ಯಕ್ಷರನ್ನು ಚುನಾಯಿಸಲು ಕಾರ್ಯವಿಧಾನ

**ಆಚಾರ್ಯ ಜೆ.ಬಿ. ಕೃಪಲಾನಿ** : (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನಿಮ್ಮ ಅನುಮತಿಯೊಡನೆ, ಶಾಶ್ವತ ಅಧ್ಯಕ್ಷರನ್ನು ಚುನಾಯಿಸುವ ಕಾರ್ಯವಿಧಾನವನ್ನು ನಿಗದಿಪಡಿಸುವ ಮುಂದಿನ ನಿರ್ಣಯವನ್ನು ನಾನು ಮಂಡಿಸಲು ಬಯಸುತ್ತೇನೆ. ಅವರನ್ನು ಸಂವಿಧಾನ ರಚನಾಸಭೆಯ ಸಭಾಧ್ಯಕ್ಷರು ಎಂದು ಕರೆಯಲು ನಾವು ಉದ್ದೇಶಿಸಿದ್ದೇವೆ. ನಿರ್ಣಯವು ಹೀಗಿದೆ:

"ಅಧ್ಯಕ್ಷರ ಚುನಾವಣೆಗೆ ಕೆಳಕಂಡ ನಿಯಮಗಳನ್ನು ಅಂಗೀಕರಿಸಬೇಕೆಂದು ಈ ಮೂಲಕ ಸಭೆಯು ನಿರ್ಣಯಿಸುತ್ತದೆ.

(೧) ಇಂದು ಮಧ್ಯಾಹ್ನ ೨-೩೦ ಗಂಟೆಯೊಳಗೆ ಯಾವುದೇ ಸಮಯದಲ್ಲಿ ಯಾವುದೇ ಸದಸ್ಯರು ತಾತ್ಕಾಲಿಕ ಅಧ್ಯಕ್ಷರಿಗೆ ಅಥವಾ ಅವರಿಂದ ನೇಮಕ ಮಾಡಲಾದ ವ್ಯಕ್ತಿಗೆ ಸೂಚಕರಿಂದ ಸಹಿ ಮಾಡಿದ ಮತ್ತು ಮೂರನೆಯ ಸದಸ್ಯರೊಬ್ಬರಿಂದ ಅನುಮೋದಿಸಿದ ನಾಮನಿರ್ದೇಶನ ಪತ್ರವನ್ನು ತಲಪಿಸುವ ಮೂಲಕ ಇನ್ನೊಬ್ಬ ಸದಸ್ಯರನ್ನು ಚುನಾವಣೆಗೆ ನಾಮನಿರ್ದೇಶನ ಮಾಡಬಹುದು. ಅದರಲ್ಲಿ ಮುಂದಿನ ಸಂಗತಿಗಳನ್ನು ನಮೂದಿಸಿರಬೇಕು–

(ಎ) ನಾಮನಿರ್ದೇಶನ ಮಾಡಲಾಗಿರುವ ಸದಸ್ಯರ ಹೆಸರು, ಮತ್ತು

(ಬಿ) ಅತ್ಯಂತ ಕಡಿಮೆ ಸಂಖ್ಯೆಯ ಮತಗಳು ಬಂದರೆ ಚುನಾವಣೆಯಿಂದ ಅವರನ್ನು ಹೊರಗಿಡಲಾಗುವುದು ಎನ್ನುವುದಕ್ಕೆ ಅಂತಹ ಸದಸ್ಯರ ಒಪ್ಪಿಗೆಯಿದೆ ಎಂಬುದನ್ನು ಸೂಚಕರು ಖಚಿತ ಪಡಿಸಿಕೊಂಡಿದ್ದಾರೆ ಎಂಬ ಹೇಳಿಕೆ.

(೨) ತಾತ್ಕಾಲಿಕ ಅಧ್ಯಕ್ಷರಿಗೆ ಅನುಕೂಲವಾದ ಯಾವುದೇ ಸಮಯದಲ್ಲಿ, ತಾತ್ಕಾಲಿಕ ಅಧ್ಯಕ್ಷರು ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡ ಸದಸ್ಯರ ಹೆಸರುಗಳನ್ನು ಸೂಚಕರು ಮತ್ತು ಅನುಮೋದಕರ ಹೆಸರುಗಳೊಡನೆ ಸಭೆಗೆ ಓದಿ ಹೇಳುತ್ತಾರೆ. ಒಂದು ಪಕ್ಷ ಒಬ್ಬರೇ ಸದಸ್ಯರ ಹೆಸರು

ನಾಮನಿರ್ದೇಶನವಾಗಿದ್ದರೆ, ಆ ಸದಸ್ಯರೇ ಚುನಾಯಿತರಾಗಿದ್ದಾರೆಂದು ಘೋಷಿಸುತ್ತಾರೆ. ಒಬ್ಬರಿಗಿಂತ ಹೆಚ್ಚಿನ ಸಂಖ್ಯೆಯ ಸದಸ್ಯರು ನಾಮನಿರ್ದೇಶಿತರಾಗಿದ್ದರೆ, ತಾತ್ಕಾಲಿಕ ಅಧ್ಯಕ್ಷರು ನಿಗದಿಪಡಿಸುವ ದಿನಾಂಕದಂದು ಸಭೆಯು ಮತದಾನದ ಮೂಲಕ ಅಧ್ಯಕ್ಷರನ್ನು ಚುನಾಯಿಸಲು ಮುಂದಾಗುತ್ತದೆ.

(೩) ನಿಯಮ (೨)ರ ಉದ್ದೇಶಕ್ಕಾಗಿ ಒಬ್ಬ ಸದಸ್ಯ ಮತ್ತು ಅವರ ಸೂಚಕರು ಮತ್ತು ಅನುಮೋದಕರು ಸಭೆಯ ಸದಸ್ಯರಾಗಿ ಸಭೆಯ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿಲ್ಲದಿದ್ದರೆ, ಒಬ್ಬ ಸದಸ್ಯರನ್ನು ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡಿದ್ದಾರೆಂದು ಅಥವಾ ಮತ ನೀಡಲು ಅರ್ಹರೆಂದು ಪರಿಗಣಿಸಲಾಗುವುದಿಲ್ಲ.

(೪) ಕೇವಲ ಇಬ್ಬರು ಅಭ್ಯರ್ಥಿಗಳು ಮಾತ್ರ ನಾಮನಿರ್ದೇಶನಗೊಂಡಿದ್ದರೆ, ಮತದಾನದಲ್ಲಿ ಅಧಿಕ ಮತಗಳನ್ನು ಗಳಿಸಿದ ಅಭ್ಯರ್ಥಿಯನ್ನು ಚುನಾಯಿತರೆಂದು ಘೋಷಿಸಬೇಕು. ಅವರು ಸಮಾನ ಮತಗಳನ್ನು ಗಳಿಸಿದರೆ ಅದೃಷ್ಟದ ಚೀಟಿಯನ್ನು ಎತ್ತುವ ಮೂಲಕ ಚುನಾವಣೆಯನ್ನು ಮಾಡಬೇಕು.

(೫) ಇಬ್ಬರಿಗಿಂತ ಹೆಚ್ಚು ಅಭ್ಯರ್ಥಿಗಳು ನಾಮನಿರ್ದೇಶನಗೊಂಡಾಗ ಮತ್ತು ಮೊದಲ ಮತದಾನದಲ್ಲಿ ಯಾವ ಅಭ್ಯರ್ಥಿಯೂ ಇತರ ಅಭ್ಯರ್ಥಿಗಳು ಗಳಿಸಿದ ಒಟ್ಟು ಮತಗಳಿಗಿಂತ ಹೆಚ್ಚು ಮತಗಳನ್ನು ಗಳಿಸದಿದ್ದಾಗ, ಅತ್ಯಂತ ಕಡಿಮೆ ಮತಗಳನ್ನು ಗಳಿಸಿದ ಅಭ್ಯರ್ಥಿಯನ್ನು ಚುನಾವಣೆಯಿಂದ ಹೊರಗಿಡಬೇಕು ಮತ್ತು ಮತದಾನವನ್ನು ಮುಂದುವರಿಸಬೇಕು. ಪ್ರತಿ ಸುತ್ತಿನ ಮತದಾನದ ಅನಂತರವೂ ಅತ್ಯಂತ ಕಡಿಮೆ ಮತಗಳನ್ನು ಗಳಿಸಿದ ಅಭ್ಯರ್ಥಿಯನ್ನು ಚುನಾವಣೆಯಿಂದ ಹೊರಗಿಡುತ್ತಾ, ಒಬ್ಬ ಅಭ್ಯರ್ಥಿಯು ಉಳಿದ ಇನ್ನೊಬ್ಬ ಅಭ್ಯರ್ಥಿಗಿಂತ ಹೆಚ್ಚು ಮತಗಳನ್ನು ಗಳಿಸುವವರೆಗೆ ಅಥವಾ ಉಳಿದ ಅಭ್ಯರ್ಥಿಗಳು ಗಳಿಸಿದ ಒಟ್ಟು ಮತಗಳಿಗಿಂತ ಹೆಚ್ಚು ಮತಗಳನ್ನು ಗಳಿಸುವವರೆಗೆ ಮತದಾನವನ್ನು ನಡೆಸಿ ಸಂದರ್ಭಾನುಸಾರ ಅಂತಹ ಅಭ್ಯರ್ಥಿಯನ್ನು ಚುನಾಯಿತರೆಂದು ಘೋಷಿಸಬೇಕು.

(೬) ಒಂದು ಪಕ್ಷ ಯಾವುದೇ ಮತದಾನದಲ್ಲಿ ಯಾವುದೇ ಮೂರು ಅಥವಾ ಹೆಚ್ಚಿನ ಅಭ್ಯರ್ಥಿಗಳು ಸಮಾನ ಮತಗಳನ್ನು ಗಳಿಸಿದರೆ ಮತ್ತು ನಿಯಮ (೪)ರ ಅಡಿಯಲ್ಲಿ ಅವರಲ್ಲಿ ಒಬ್ಬರನ್ನು ಚುನಾವಣೆಯಿಂದ ಹೊರಗಿಡಬೇಕಾದಾಗ, ಸಮಾನ ಮತಗಳನ್ನು ಗಳಿಸಿದ ಅಭ್ಯರ್ಥಿಗಳಲ್ಲಿ ಒಬ್ಬರನ್ನು ಅದೃಷ್ಟದ ಚೀಟಿಯನ್ನು ಎತ್ತುವ ಮೂಲಕ ಚುನಾವಣೆಯಿಂದ ಹೊರಗಿಡಬೇಕು."

ಸಭಾಧ್ಯಕ್ಷರನ್ನು ಚುನಾಯಿಸುವ ಕಾರ್ಯವಿಧಾನದ ಈ ನಿರ್ಣಯವನ್ನು ಸಭೆಗೆ ಶಿಫಾರಸು ಮಾಡಲು ನಾನು ಹೆಚ್ಚು ಮಾತನಾಡಬೇಕಾದ ಅಗತ್ಯವೇನಿಲ್ಲ. ಎಲ್ಲ ಶಾಸನಸಭೆಗಳಲ್ಲಿಯೂ ಸಾಮಾನ್ಯವಾಗಿ ಅನ್ವಯವಾಗುವ ನಿಯಮಗಳು ಇವು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ನಿರ್ಣಯವನ್ನು ಅನುಮೋದಿಸಲು ಅನುಮತಿ ಕೋರುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈ ನಿರ್ಣಯವನ್ನು ಕ್ರಮಬದ್ಧವಾಗಿ ಮಂಡಿಸಲಾಗಿದೆ ಮತ್ತು ಅನುಮೋದಿಸಲಾಗಿದೆ. ಈಗ ನಾನು ಅದನ್ನು ಮತದಾನಕ್ಕೆ ಇಡುತ್ತೇನೆ.

**ಡಾ. ಪಿ.ಎಸ್. ದೇಶ್‌ಮುಖ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ನಾನು ಕೆಲವು ಶಾಬ್ದಿಕ ಬದಲಾವಣೆಗಳನ್ನು ಸೂಚಿಸಬಹುದೆ?

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಗೌರವಾನ್ವಿತ ಸದಸ್ಯರು ತಾವು ಬಯಸುವ ಯಾವುದೇ ಸಲಹೆಗಳನ್ನು ಸೂಚಿಸಲು ಸಂಪೂರ್ಣವಾಗಿ ಅರ್ಹರಾಗಿದ್ದಾರೆ. ಅವುಗಳನ್ನು ಕ್ರಮಬದ್ಧವಾಗಿ ಗುರುತುಹಾಕಿಕೊಂಡ ಮೇಲೆ ನಾವು ಅವುಗಳನ್ನು ಪರಿಗಣಿಸೋಣ. ಗೌರವಾನ್ವಿತ ಸದಸ್ಯರು ತಮ್ಮ ಸಲಹೆಗಳನ್ನು ಕೊಡುವ ಮುನ್ನ ವೇದಿಕೆಗೆ ಬರುತ್ತಾರೆಯೇ?

**ಡಾ. ಪಿ.ಎಸ್. ದೇಶ್‌ಮುಖ್ :** (ವೇದಿಕೆಗೆ ಬಂದ ಮೇಲೆ)

ನನ್ನ ಸಲಹೆಯೇನೆಂದರೆ (೧)ನೇ ಕಂಡಿಕೆಯ ೪ನೇ ಸಾಲಿನಲ್ಲಿ 'ಮೂರನೆಯ' ಎಂಬ ಶಬ್ದದ ಬದಲು 'ಇನ್ನೊಬ್ಬರು' ಎಂದು, ಮತ್ತು (೩)ನೇ ಕಂಡಿಕೆಯಲ್ಲಿ ಕೊನೆಯ ಸಾಲಿಗೆ ಒಂದು ಸಾಲು ಹಿಂದೆ, 'ಮತ್ತು' ಎಂಬ ಶಬ್ದದ ಬದಲು ಎರಡೂ ಕಡೆಗಳಲ್ಲೂ 'ಅಥವಾ' ಎಂದು ಪರ್ಯಾಯ ಶಬ್ದಗಳನ್ನು ಬಳಸಬೇಕು. ನನ್ನ ಅಭಿಪ್ರಾಯದಲ್ಲಿ ಈ ಬದಲಾವಣೆಗಳು ಅಗತ್ಯ ಎಂದು ಭಾವಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಆಚಾರ್ಯ ಕೃಪಲಾನಿ ಅವರು ಈ ಬದಲಾವಣೆಗಳನ್ನು ಒಪ್ಪಿಕೊಳ್ಳುತ್ತಾರೆಯೆ?

**ಆಚಾರ್ಯ ಜೆ.ಬಿ. ಕೃಪಲಾನಿ :** ಯಾವ ಆಕ್ಷೇಪವೂ ಇಲ್ಲ.

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ): ಇದರ ಅರ್ಥವೇನೆಂದರೆ ಅನುಮೋದಿಸುವವರು ಸದಸ್ಯರಲ್ಲದಿರಬಹುದು ಎಂದಾಗುತ್ತದೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಅದನ್ನು ವ್ಯಾಖ್ಯಾನಿಸಲು ನಾನು ಇಲ್ಲಿ ಇಲ್ಲ. ವ್ಯಾಖ್ಯಾನಿಸುವುದು ಅತ್ಯಂತ ಅಪಾಯಕಾರಿಯಾದ ಸಂಗತಿ. ಸಭೆಯು ಅನುಮತಿ ಕೊಟ್ಟರೆ ನಾನು ಪ್ರಸ್ತಾವಿತ ತಿದ್ದುಪಡಿಗಳನ್ನು ಓದುತ್ತೇನೆ. ಪ್ರಸ್ತಾವಿತವಾದ ಮೊದಲನೆಯ ತಿದ್ದುಪಡಿ ಎಂದರೆ (೧)ನೆಯ ಕಂಡಿಕೆಯಲ್ಲಿ 'ಮೂರನೆಯ' ಎಂಬ ಶಬ್ದದ ಬದಲು 'ಇನ್ನೊಬ್ಬರು' ಎಂಬ ಶಬ್ದವನ್ನು ಪರ್ಯಾಯವಾಗಿ ಬಳಸಬೇಕು. ಆಚಾರ್ಯ ಕೃಪಲಾನಿ ಅವರು ಇದನ್ನು ಒಪ್ಪಿಕೊಳ್ಳುತ್ತಾರೆಯೇ?

**ಆಚಾರ್ಯ ಜೆ.ಬಿ. ಕೃಪಲಾನಿ :** ನನ್ನ ಮಟ್ಟಿಗೆ ಹೇಳುವುದಾದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನನಗೆ ಯಾವ ಆಕ್ಷೇಪವೂ ಇಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : 'ಮೂರನೆಯ' ಎಂಬ ಶಬ್ದದ ಬದಲು 'ಇನ್ನೊಬ್ಬರು' ಎಂದು ಬದಲಾಯಿಸಲು ಗೌರವಾನ್ವಿತ ಸದಸ್ಯರಿಗೆ ಯಾರಿಗಾದರೂ ಆಕ್ಷೇಪವಿದೆಯೆ?

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಈ ತಿದ್ದುಪಡಿಗೆ ನನ್ನ ಆಕ್ಷೇಪವಿದೆ. ಈ ಬದಲಾವಣೆಯನ್ನು ಒಪ್ಪಿಕೊಳ್ಳುವುದರಲ್ಲಿ ಒಂದು ಅನನುಕೂಲವಿದೆ. ಈ ಕಂಡಿಕೆಯ ಮೊದಲ ಭಾಗದಲ್ಲಿ ಈಗಾಗಲೆ 'ಇನ್ನೊಬ್ಬ ಸದಸ್ಯರು' ಎಂಬ ಶಬ್ದಗಳು ಕಂಡಿಕೆಯ ಎರಡನೆಯ ಸಾಲಿನಲ್ಲಿ ಇವೆ. ನೀವು ಪ್ರಸ್ತುತ ತಿದ್ದುಪಡಿಯನ್ನು ಒಪ್ಪಿಕೊಂಡರೆ, ಅಧ್ಯಕ್ಷರಾಗುತ್ತಿರುವ ವ್ಯಕ್ತಿಯೇ ತನಗೆ ತಾನೇ ಅನುಮೋದಕನಾಗಬೇಕಾಗುತ್ತದೆ ಎಂಬ ಅರ್ಥ ಬರುತ್ತದೆ. ಇದು ಅಸಂಬದ್ಧತೆ. ಆದ್ದರಿಂದ ನಾನು ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ. ಮೂಲ ಶಬ್ದ 'ಮೂರನೆಯ' ಎಂಬುದು ಮುಂದುವರಿಯಬೇಕು ಮತ್ತು ಈ ತಿದ್ದುಪಡಿಯಲ್ಲಿ ಯಾವ ಅರ್ಥವೂ ಇಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಆಚಾರ್ಯ ಕೃಪಲಾನಿ ಅವರ ತಿದ್ದುಪಡಿಯಲ್ಲಿರುವ ಮೂಲ ಶಬ್ದ ಇರಬೇಕು ಮತ್ತು ಯಾವ ಬದಲಾವಣೆಯನ್ನೂ ಮಾಡಬಾರದು ಎನ್ನುವುದು ನಿಮ್ಮ ಅಪೇಕ್ಷೆಯೆ?

**ಶ್ರೀ ಅನಂತಶಯನಮ್ ಅಯ್ಯಂಗಾರ್ :** ಹೌದು.

**ಡಾ. ಪಿ.ಎಸ್. ದೇಶ್‌ಮುಖ್ :** ನನ್ನ ತಿದ್ದುಪಡಿಗೆ ಬಂದಿರುವ ಆಕ್ಷೇಪವನ್ನು ಗಮನಿಸಿದ್ದೇನೆ. ನಾನು ಅದಕ್ಕೆ ಒತ್ತಾಯ ಮಾಡುವುದಿಲ್ಲ. ಆದರೆ ಮೊದಲನೆಯ ಶಬ್ದ 'ಇನ್ನೊಬ್ಬರು' ಎಂಬುದನ್ನು 'ಒಬ್ಬರು' ಎಂದು ಮತ್ತು 'ಮೂರನೆಯ' ಎನ್ನುವುದನ್ನು 'ಇನ್ನೊಬ್ಬರು' ಎಂದು ಬದಲಾಯಿಸಿದರೆ ಕೇಳಲು ಎಷ್ಟೋ ಹಿತವಾಗಿರುತ್ತದೆ. ಅನೇಕ ಬದಲಾವಣೆಗಳನ್ನು ನಾನು ಸೂಚಿಸುತ್ತಿದ್ದೇನೆ ಎಂಬಂತೆ ತೋರುತ್ತಿದೆಯೇನೋ ಎಂಬ ಅಂಜಿಕೆ ನನಗೆ. ಆದರೆ ನಾವು ಸಂವಿಧಾನವನ್ನು ರಚಿಸುತ್ತಿದ್ದೇವೆ. ಈ ಸಭೆಯಿಂದ ಯಾವುದೂ ಹಾಗೇ ಹೋಗಬಾರದು ಎಂದು ನನ್ನ ಅಪೇಕ್ಷೆ....

**ಮಾನ್ಯ ಅಧ್ಯಕ್ಷರು** ಡಾ. ಸಚ್ಚಿದಾನಂದ ಸಿನ್ಹ) : ಇದು ಸಂವಿಧಾನದ ವಿಚಾರ ಅಲ್ಲವೇ ಅಲ್ಲ. ನೀವು ಮೊದಲು 'ಮೂರನೆಯ' ಎಂಬ ಶಬ್ದದ ಬದಲು 'ಇನ್ನೊಬ್ಬರು' ಎಂದು ಬದಲಾಯಿಸಬೇಕೆಂದು ಒಂದು ಪ್ರಸ್ತಾವವನ್ನು ಮಾಡಿದಿರಿ. ನಿಮ್ಮ ಮೊದಲನೆಯ ಪ್ರಸ್ತಾವ ಇತ್ಯರ್ಥವಾಗುವ ಮೊದಲೇ ಇನ್ನೊಂದು ಪ್ರಸ್ತಾವವನ್ನು ತಂದರೆ ಅದು ಸಭೆಗೆ ಯುಕ್ತವಾದುದಲ್ಲ. ಈಗ ಸಭೆಯ ಮುಂದಿರುವ ಏಕಮಾತ್ರ ಪ್ರಶ್ನೆಯೆಂದರೆ ಆಚಾರ್ಯ ಕೃಪಲಾನಿ ಅವರ ನಿರ್ಣಯದಲ್ಲಿರುವ 'ಮೂರನೆಯ' ಎಂಬ ಶಬ್ದವನ್ನು 'ಇನ್ನೊಬ್ಬರು' ಎಂದು ಬದಲಾಯಿಸಬೇಕೆ ಎನ್ನುವುದು. ಇದನ್ನು ಇತ್ಯರ್ಥ ಮಾಡಿದ ಮೇಲೆ ನೀವು ಬಯಸುವ ಇನ್ನೊಂದು ಪ್ರಸ್ತಾವವನ್ನು ಎತ್ತಿಕೊಳ್ಳಬಹುದು.

**ಡಾ. ಪಿ.ಎಸ್. ದೇಶ್‌ಮುಖ್** : ಇದೊಂದು ಆನುಷಂಗಿಕವಾದ ಸಲಹೆ. ಇದನ್ನು ನಿಮಗಾಗಿ ಓದಿ ಹೇಳುತ್ತೇನೆ...

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಬೇಡ.

**ಆಚಾರ್ಯ ಜೆ.ಬಿ. ಕೃಪಲಾನಿ** : ಈಗ ಇರುವಂತೆಯೇ ಅತ್ಯುತ್ತಮ ಎಂದು ನಾನು ಭಾವಿಸುತ್ತೇನೆ, ವಿವಾದಕ್ಕೆ ಆಸ್ಪದ ಕೊಡಬಾರದೆಂದು ನಾನು ತಿದ್ದುಪಡಿಯನ್ನು ಅಂಗೀಕರಿಸಿದ್ದೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈ ಸಭೆಗೆ ನಾನು ಸಲಹೆ ಕೊಡಬಹುದಾದರೆ, ಅರ್ಥದಲ್ಲಿ ಗಣನೀಯವಾದ ವ್ಯತ್ಯಾಸವೇನೂ ಇಲ್ಲ. ಆ ಶಬ್ದ ಹಾಗೇ ಉಳಿಯಬಹುದು. ಆದರೆ ಸಭೆಯು ಅದನ್ನು ನಿರ್ಣಯ ಮಾಡಬೇಕು.

**ಗೌರವಾನ್ವಿತ ಶ್ರೀ ಸಿ. ರಾಜಗೋಪಾಲಾಚಾರಿಯರ್** (ಮದ್ರಾಸ್ : ಸಾಮಾನ್ಯ) : ತಿದ್ದುಪಡಿಯನ್ನು ಮಂಡಿಸಿದವರು ತಪ್ಪು ಗ್ರಹಿಕೆಯಲ್ಲಿದ್ದಾರೆ ಎಂದು ನಾನು ಭಾವಿಸುತ್ತೇನೆ. ಇದು ಭಾಷಾ ಲಾಲಿತ್ಯದ ಪ್ರಶ್ನೆಯಲ್ಲ. ಮೂಲ ನಿರ್ಣಯದಲ್ಲಿರುವಂತೆ ಶಬ್ದಗಳು ಒಳಗೊಳ್ಳುವ ಸಂಗತಿಗಳು ಹೀಗಿವೆ : ಒಬ್ಬ ನಾಮನಿರ್ದೇಶಿತನಿಗಿಂತ ವಿಭಿನ್ನನಾದ ಒಬ್ಬ ಸೂಚಕ ಇರಬೇಕು. ಮತ್ತೆ, ಇನ್ನೊಂದು ಸಂಗತಿಯೇನೆಂದರೆ ಅನುಮೋದಕನು ಈ ಇಬ್ಬರಿಗಿಂತ ವಿಭಿನ್ನವಾದವನಾಗಿರಬೇಕು. ಆದ್ದರಿಂದ 'ಮೂರನೆಯ' ಎಂಬ ಶಬ್ದವು ಕರಾರುವಾಕ್ಕಾಗಿದೆ ಮತ್ತು ಅಗತ್ಯವಾಗಿದೆ. ಇದರಲ್ಲಿ ಏನಾದರೂ ಬದಲಾವಣೆ ಮಾಡಲು ಹೋದರೆ ತಪ್ಪಿಗೆ ಅವಕಾಶವಾಗುತ್ತದೆ.

**ಒಬ್ಬರು ಗೌರವಾನ್ವಿತ ಸದಸ್ಯರು** : ಈ ನಿರ್ಣಯವನ್ನು ಸೂಚಿಸಿದವರು ಸಲಹೆ ಮಾಡಲಾದ ತಿದ್ದುಪಡಿಯನ್ನು ಈಗಾಗಲೇ ಒಪ್ಪಿಕೊಂಡಿರುವುದರಿಂದ, ಮತ್ತಷ್ಟು ಚರ್ಚೆಯ ಅಗತ್ಯವಿದೆ ಎಂದು ನನಗೆ ಅನ್ನಿಸುವುದಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಆದರೆ ಒಂದು ನಿರ್ಣಯವನ್ನು ಮಂಡಿಸಿದವರಿಗೆ ತರುವಾಯ ತಮ್ಮ ಮನಸ್ಸನ್ನು ಬದಲಾಯಿಸಿಕೊಳ್ಳಲು ನೀವು ಖಂಡಿತವಾಗಿಯೂ ಅನುಮತಿಯನ್ನು ಕೊಡಬಹುದು. ಅದರಿಂದ ಏನೂ ಹಾನಿ ಸಂಭವಿಸಲಾರದು. ಅವರು ಹಾಗೆ ಮಾಡದಂತೆ ನೀವು ಅವರನ್ನು ತಡೆಯಲಾರಿರಿ. ಈ ವಿಚಾರವಾಗಿ ನಾವು ನಡೆಸಿದ ಚರ್ಚೆಯ ಫಲಿತಾಂಶವಾಗಿ 'ಮೂರನೆಯ' ಎಂಬ ಶಬ್ದವನ್ನು ಹಾಗೆಯೇ ಬಿಡಬಹುದು.

**ಒಬ್ಬರು ಗೌರವಾನ್ವಿತ ಸದಸ್ಯರು** : ಮಾನ್ಯರೆ, ಆಚಾರ್ಯ ಕೃಪಲಾನಿ ಅವರು ಅಧ್ಯಕ್ಷರ ಹೆಸರು 'ಸಭಾಧ್ಯಕ್ಷರು' ಎಂದಾಗಿರಬೇಕು ಎಂದು ಔಪಚಾರಿಕವಾಗಿ ಮಂಡಿಸಿದ್ದಾರೆ. ಅದನ್ನು ಮತಕ್ಕೆ ಹಾಕಿಲ್ಲ. ಅದನ್ನು ಅಂಗೀಕರಿಸಿದ್ದರೆ ಮತಕ್ಕೆ ಹಾಕಬೇಕಾದ ಅಗತ್ಯವಿದೆಯೇ ಎಂದು ನನಗೆ ತಿಳಿದಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಇಲ್ಲ. ಅದನ್ನು ಇನ್ನೂ ಅಂಗೀಕರಿಸಿಲ್ಲ. ಸಾಂವಿಧಾನಿಕ ಸಲಹೆಗಾರರು ನನಗೆ ಸಲಹೆ ನೀಡಿರುವುದೇನೆಂದರೆ ಸಂಸತ್ತಿನ ಕಾರ್ಯವಿಧಾನದ ಪ್ರಕಾರವಾಗಿ ಪ್ರಭಾರಿ ಅಧ್ಯಕ್ಷನಾದ ನನಗೆ ಮತ್ತು ಶಾಶ್ವತ ಅಧ್ಯಕ್ಷರಿಗೆ ಇಬ್ಬರಿಗೂ 'ಅಧ್ಯಕ್ಷ' (ಚೇರ್‌ಮನ್) ಎಂಬ ಶಬ್ದವನ್ನೇ ನಾವು ಉಪಯೋಗಿಸಬೇಕು. ಆದರೆ ಇಷ್ಟರಲ್ಲಿಯೇ ಅಸ್ತಿತ್ವಕ್ಕೆ ಬರಲಿರುವ ನಿಯಮಗಳ ಸಮಿತಿಯು ಈ ವಿಚಾರವನ್ನು

ನಿರ್ಣಯಿಸುತ್ತದೆ. 'ಸಭಾಧ್ಯಕ್ಷ' (ಪ್ರೆಸಿಡೆಂಟ್) ಎಂಬ ಶಬ್ದವನ್ನು ಆರಿಸಿಕೊಳ್ಳುವುದು ನಿಯಮಗಳ ಸಮಿತಿಗೆ ಬಿಟ್ಟ ವಿಚಾರವಾಗಿರುತ್ತದೆ. ಆದ್ದರಿಂದ ಸದ್ಯಕ್ಕೆ 'ಅಧ್ಯಕ್ಷ' (ಚೇರ್‌ಮನ್) ಎಂಬ ಶಬ್ದವನ್ನು ಈಗಿರುವಂತೆಯೇ ಇಟ್ಟುಕೊಳ್ಳೋಣ.

ಈಗ ಆಚಾರ್ಯ ಕೃಪಲಾನಿ ಅವರ ನಿರ್ಣಯದ ಮೂರನೆಯ ಉಪಪ್ರಕರಣವನ್ನು ತೆಗೆದುಕೊಳ್ಳೋಣ.

"ನಿಯಮ (೨)ರ ಉದ್ದೇಶಕ್ಕಾಗಿ, ಒಬ್ಬ ಸದಸ್ಯ ಮತ್ತು ಅವರ ಸೂಚಕರು ಮತ್ತು ಅನುಮೋದಕರು, ಸಭೆಯ ಸದಸ್ಯರಾಗಿ ಸಭೆಯ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿಲ್ಲದಿದ್ದರೆ, ಒಬ್ಬ ಸದಸ್ಯರನ್ನು ಕ್ರಮಬದ್ಧವಾಗಿ ನಾಮನಿರ್ದೇಶನಗೊಂಡಿದ್ದಾರೆಂದು ಅಥವಾ ಮತ ನೀಡಲು ಅರ್ಹರೆಂದು ಪರಿಗಣಿಸಲಾಗುವುದಿಲ್ಲ."

ಇಲ್ಲಿನ ತಿದ್ದುಪಡಿ ಏನೆಂದರೆ, ಈ ನಿರ್ದಿಷ್ಟವಾದ ಕಲಂನಲ್ಲಿ ಎರಡು ಕಡೆ ಬರುವ 'ಮತ್ತು' ಎಂಬ ಶಬ್ದಕ್ಕೆ ಪರ್ಯಾಯವಾಗಿ 'ಅಥವಾ' ಎಂಬ ಶಬ್ದವನ್ನು ಬಳಸಬೇಕು. ಆಚಾರ್ಯ ಕೃಪಲಾನಿ ಅವರು ಅದನ್ನು ಅಂಗೀಕರಿಸಲು ಸಿದ್ಧರಾಗಿದ್ದಾರೆಯೇ ಎಂದು ಕೇಳಲು ನಾನು ಬಯಸುತ್ತೇನೆ.

**ಆಚಾರ್ಯ ಜೆ.ಬಿ. ಕೃಪಲಾನಿ** : ಅದು ಅರ್ಥದಲ್ಲಿ ವ್ಯತ್ಯಾಸವನ್ನೇನೂ ಮಾಡುವುದಿಲ್ಲ ಎಂದು ಅರಿಕೆ ಮಾಡುತ್ತೇನೆ. ಆದರೆ 'ಮತ್ತು' ಇಲ್ಲಿ ಹೆಚ್ಚು ಸೂಕ್ತ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಪ್ರಾಯೋಗಿಕವಾಗಿ ಒಂದೇ ಅರ್ಥವನ್ನು ಕೊಟ್ಟರೂ 'ಅಥವಾ' ಎಂದು ಬದಲಾಯಿಸುವುದಕ್ಕಿಂತ 'ಮತ್ತು' ಎಂಬುದಕ್ಕೆ ಅಂಟಿಕೊಳ್ಳುವುದಕ್ಕೆ ನೀವು ಇಷ್ಟ ಪಡುತ್ತೀರಿ ಎಂದು ನಾನು ಗ್ರಹಿಸುತ್ತೇನೆ?

**ಆಚಾರ್ಯ ಜೆ.ಬಿ. ಕೃಪಲಾನಿ** : ಹೌದು ಮಾನ್ಯರೆ, ನಿರ್ಣಯದಲ್ಲಿರುವ ಶಬ್ದಗಳಿಗೇ ನಾನು ಅಂಟಿಕೊಳ್ಳುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಸಭೆಯ ಅಭಿಮತ ಏನು?

**ಕೆಲವು ಗೌರವಾನ್ವಿತ ಸದಸ್ಯರು** : 'ಅಥವಾ' ಎನ್ನುವುದೇ ಸರಿ.

**ಬಹಳ ಜನ ಗೌರವಾನ್ವಿತ ಸದಸ್ಯರು** : ಬದಲಾವಣೆ ಬೇಡ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : 'ಮತ್ತು' ಎನ್ನುವುದನ್ನು 'ಅಥವಾ' ಎಂದು ಬದಲಾಯಿಸುವ ಅಗತ್ಯವಿಲ್ಲ ಹಾಗೂ ನಿರ್ಣಯವು ಈಗಿರುವಂತೆಯೇ ಇರಲಿ ಎನ್ನುವುದು ಸಭೆಯ ಅಭಿಮತ ಎಂದು ತೋರುತ್ತದೆ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಸ್ವಾಮಿ, ನಾನು ಈ ನಿರ್ಣಯವನ್ನು ಕುರಿತು ಕೆಲವು ಮಾತುಗಳನ್ನು ಆಡಲು ಬಯಸುತ್ತೇನೆ. ಸ್ಪರ್ಧೆಗಿಳಿದ ಅಭ್ಯರ್ಥಿಯು ಹಿಂತೆಗೆದುಕೊಳ್ಳಲು ಇಲ್ಲಿ ಯಾವ ಅವಕಾಶವನ್ನೂ ಒದಗಿಸಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈಗ ಭಾಷಣ ಮಾಡಲು ಬಂದಿರುವ ಗೌರವಾನ್ವಿತ ಸದಸ್ಯರು ಹೇಳಲು ಬಯಸಿರುವುದೇನೆಂದರೆ ಇಂತಹ ಯಾವುದೇ ನಿಯಮಗಳಲ್ಲಿ ಒಬ್ಬ ಸದಸ್ಯನು ಚುನಾವಣಾ ಸ್ಪರ್ಧೆಯಿಂದ ಹಿಂತೆಗೆದುಕೊಳ್ಳಲು ಅವಕಾಶವಿರುತ್ತದೆ. ಅದು ಸತ್ಯ ಎಂದು ನಾನು ಭಾವಿಸುತ್ತೇನೆ. ಅವರು ಹೇಳುವ ಪ್ರಕಾರ – ಅಂತಹ ಪರಿಸ್ಥಿತಿ ಉದ್ಭವಿಸದೆ ಹೋದರೂ ಚುನಾವಣೆಗೆ ನಾಮನಿರ್ದೇಶಿತರಾದ ಯಾವುದೇ ಸದಸ್ಯರು, ಸ್ಪರ್ಧೆಯಿಂದ ಹಿಂದೆ ಸರಿಯಲು ಬಯಸಿದರೆ ಒಂದು ಗೊತ್ತಾದ ಕಾಲದಲ್ಲಿ ಹಾಗೆ ಮಾಡಲು ಒಂದು ಅವಕಾಶವನ್ನು ಇದಕ್ಕೆ ಸೇರಿಸಬೇಕು. ಅದನ್ನು ಸೇರಿಸುವುದರಿಂದ ಯಾವುದೇ ಹಾನಿಯಿಲ್ಲ ಎಂದು ನಾನು ಭಾವಿಸುತ್ತೇನೆ.

**ಶ್ರೀ ಎಚ್.ವಿ. ಕಾಮತ್** : ಸ್ವಾಮಿ, ನಿಮ್ಮ ಅನುಮತಿಯೊಡನೆ ನಾನು ಈ ಕಲಮನ್ನು ಸೇರಿಸಲು ಶಿಫಾರಸು ಮಾಡುತ್ತೇನೆ. "ಒಂದಕ್ಕಿಂತ ಹೆಚ್ಚು ಸಂಖ್ಯೆಯ ಅಭ್ಯರ್ಥಿಗಳು ನಾಮನಿರ್ದೇಶಿತರಾಗಿದ್ದರೆ, ಅಂತಹ

ಅಭ್ಯರ್ಥಿಗಳಲ್ಲಿ ಒಬ್ಬರು ಅಥವಾ ಹಲವರು ಬಯಸಿದರೆ, ಅವರು ಹಿಂತೆಗೆದುಕೊಳ್ಳಲು ಅಧ್ಯಕ್ಷರು ಒಂದು ದಿನಾಂಕ ಮತ್ತು ಸಮಯವನ್ನು ಗೊತ್ತು ಪಡಿಸುತ್ತಾರೆ."

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ತೀರ ಸರಿಯಾಗಿದೆ. ನಿಮ್ಮ ಸಲಹೆಯ ಸಾರವನ್ನು ನನಗೆ ಸಾಧ್ಯವಾದ ಮಟ್ಟಿಗೂ ಸ್ಪಷ್ಟವಾದ ಮಾತುಗಳಲ್ಲಿ ಸೇರಿಸಲು ಪ್ರಯತ್ನಿಸುತ್ತೇನೆ.

ಸರಿ ಈಗ, ಎಲ್ಲ ತಿದ್ದುಪಡಿಗಳನ್ನೂ ಇತ್ಯರ್ಥ ಮಾಡಿರುವುದರಿಂದ ಆಚಾರ್ಯ ಕೃಪಲಾನಿ ಅವರ ನಿರ್ಣಯವನ್ನು ಈಗ ಸಭೆಯ ಒಪ್ಪಿಗೆ ಪಡೆದುಕೊಳ್ಳಲು ಔಪಚಾರಿಕವಾಗಿ ಇಡುತ್ತೇನೆ.

ನಿರ್ಣಯವನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಆಚಾರ್ಯ ಕೃಪಲಾನಿ ಅವರ ನಿರ್ಣಯವು ಕ್ರಮಬದ್ಧವಾಗಿ ಅಂಗೀಕೃತವಾಗಿದೆ ಎಂದು ನಾನು ಘೋಷಿಸುತ್ತೇನೆ.

**ಕೇಂದ್ರೀಯ ಶಾಸನಸಭೆಯ ನಿಯಮಗಳು ಮತ್ತು ಸ್ಥಾಯೀ ಆದೇಶಗಳನ್ನು ತಾತ್ಕಾಲಿಕವಾಗಿ ಅಂಗೀಕರಿಸುವುದು.**

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈಗ ಮಂಡಿಸಲು ಉಳಿದಿರುವ ಮೂರು ನಿರ್ಣಯಗಳಲ್ಲಿ ಮೊದಲನೆಯದನ್ನು ಮಂಡಿಸುವಂತೆ ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಅವರನ್ನು ನಾನು ಆಹ್ವಾನಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನಾನು ಈ ಔಪಚಾರಿಕ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ. ಅದು ಈ ಸಭೆಯ ವ್ಯವಹಾರವನ್ನು ಸುಗಮಗೊಳಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಅದು ಹೀಗಿದೆ –

> "ಸಂವಿಧಾನಿಕ ರಚನಾಸಭೆಯು ತನ್ನದೇ ಆದ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ರಚಿಸಿಕೊಳ್ಳುವುದು ಇತ್ಯರ್ಥವಾಗಿಲ್ಲದಿರುವಾಗ ಕೇಂದ್ರೀಯ ಶಾಸನಸಭೆಯ ನಿಯಮಗಳು ಮತ್ತು ಸ್ಥಾಯೀ ಆದೇಶಗಳನ್ನು, ಅಧ್ಯಕ್ಷರು ತಮ್ಮ ಸಂಪೂರ್ಣ ವಿವೇಚನೆಯಲ್ಲಿ ಅನುಮತಿಸಬಹುದಾದ ಮಾರ್ಪಾಡುಗಳೊಡನೆ ಈ ಸಭೆಯು ಅಂಗೀಕರಿಸುತ್ತದೆ."

ಸಭೆಗೆ ತಿಳಿದಿರುವಂತೆ, ಈ ಸಂವಿಧಾನ ರಚನಾಸಭೆಯು ಯಾವುದೇ ಹೊರಗಿನ ಪ್ರಾಧಿಕಾರವು ಮಾಡಿದ ನಿಯಮಗಳು ಮತ್ತು ನಿಬಂಧನೆಗಳಿಲ್ಲದೆ ತನ್ನ ಕೆಲಸವನ್ನು ಪ್ರಾರಂಭಿಸಿದೆ. ಅದು ತನ್ನದೇ ಆದ ನಿಯಮಗಳನ್ನು ಮಾಡಬೇಕಾಗಿದೆ. ನಿಯಮಗಳನ್ನು ರಚಿಸಲು ಒಂದು ಸಮಿತಿಯನ್ನು ನೇಮಕ ಮಾಡಬೇಕೆಂದು ಕೋರುವ ಒಂದು ನಿರ್ಣಯವನ್ನು ನಾನು ಈ ಸಭೆಯಲ್ಲಿ ಅನಂತರ ಮಂಡಿಸುತ್ತೇನೆ. ಆ ಸಮಿತಿಯು ಈ ಕೆಲಸವನ್ನು ಮುಗಿಸಲು ಎರಡು ಅಥವಾ ಮೂರು ದಿನಗಳನ್ನು ತೆಗೆದುಕೊಳ್ಳುತ್ತದೆ ಎಂದು ಭಾವಿಸುತ್ತೇನೆ. ಈಗ ನಾವು ನಮ್ಮದೇ ಆದ ನಿಯಮಗಳನ್ನು ರಚಿಸಿಕೊಳ್ಳುವ ಮುನ್ನ ಈ ಕೆಲವು ದಿನಗಳ ಅವಧಿಯಲ್ಲಿ ಕಾರ್ಯನಿರ್ವಹಿಸಬೇಕಾಗಿದೆ. ಆದ್ದರಿಂದ ನಾವು ಅವಲಂಬಿಸಲು ಯಾವುದಾದರೊಂದನ್ನು ಇಟ್ಟುಕೊಳ್ಳುವುದು ಅಪೇಕ್ಷಣೀಯವಾಗಿದೆ. ಇದಕ್ಕೆ ಅತ್ಯಂತ ಸುಲಭವಾದ ವಿಧಾನವೆಂದರೆ ಕೇಂದ್ರೀಯ ಶಾಸನಸಭೆಯ ನಿಯಮಗಳನ್ನು, ಸಂಪೂರ್ಣವಾಗಿ ಅಲ್ಲವಾದರೂ, ಒಟ್ಟಿನಲ್ಲಿ ಅಳವಡಿಸಿಕೊಳ್ಳುವುದು. ಏಕೆಂದರೆ, ಸಂಪೂರ್ಣವಾಗಿ ಅಳವಡಿಸಿಕೊಂಡರೆ ಅದು ಗಣನೀಯ ತೊಂದರೆಗಳಿಗೆ ಎಡೆ ಮಾಡಿಕೊಡಬಹುದು. ಆದರೆ ನಾವು ಅದನ್ನು ಅಳವಡಿಸಿಕೊಂಡು, ಸನ್ನಿವೇಶಕ್ಕೆ ತಕ್ಕಂತೆ, ಅಗತ್ಯಬಿದ್ದರೆ ಮಾರ್ಪಾಡು ಮಾಡಿಕೊಳ್ಳಲು ಅಧ್ಯಕ್ಷರಿಗೆ ಹಕ್ಕನ್ನು ಕೊಡಬೇಕು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಗೌರವಾನ್ವಿತ ಸದಸ್ಯರು ಕೃಪೆಯಿಟ್ಟು ಈ ಶಬ್ದಗಳನ್ನು ಮಾರ್ಪಡಿಸುತ್ತಾರೆಯೇ, "ಅಧ್ಯಕ್ಷರು ತಮ್ಮ ಸಂಪೂರ್ಣ ವಿವೇಚನೆಯಲ್ಲಿ ಅನುಮತಿಸಬಹುದು" ಹೀಗೆ

ಏನಾದರೂ ಮಾಡಬೇಕಾಗುತ್ತದೆ. ಅದರ ಅರ್ಥ ಶಾಶ್ವತ ಅಧ್ಯಕ್ಷರು ಎಂದು ಭಾವಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಆ ಸಮಯದಲ್ಲಿ ಯಾರು ಅಧ್ಯಕ್ಷತೆ ವಹಿಸಿರುತ್ತಾರೋ ಅವರು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಒಳ್ಳೆಯದು.

**ಗೌರವಾನ್ವಿತ ಪಂಡಿತ್ ಗೋವಿಂದವಲ್ಲಭ ಪಂತ್ :** (ಸಂಯುಕ್ತ ಪ್ರಾಂತ್ಯಗಳು–ಜನರಲ್) : ನಾನು ನಿರ್ಣಯವನ್ನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈಗ ಗೌರವಾನ್ವಿತ ಸದಸ್ಯರು ಏನಾದರೂ ತಿದ್ದುಪಡಿಗಳು ಅಥವಾ ಸಲಹೆಗಳು ಇದ್ದರೆ ಸೂಚಿಸಬಹುದು.

**ಶ್ರೀ ಬಿಶ್ವನಾಥ್ ದಾಸ್** (ಒರಿಸ್ಸಾ : ಸಾಮಾನ್ಯ) : ಮಾನ್ಯರೆ, ನಾನು ಒಂದು ಸಂಗತಿಯನ್ನು ಸೂಚಿಸಲು ಬಯಸುತ್ತೇನೆ......

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಗೌರವಾನ್ವಿತ ಸದಸ್ಯರು ಯಾವುದಾದರೂ ತಿದ್ದುಪಡಿಯನ್ನು ಮಂಡಿಸುತ್ತಾರೆಯೋ ಎಂದು ನಾನು ತಿಳಿಯಬಹುದೆ?

**ಶ್ರೀ ಬಿಶ್ವನಾಥ್ ದಾಸ್** : ಈ ನಿರ್ಣಯದ ವಾಕ್ಯರಚನೆಯಲ್ಲಿ ಕೆಲವು ತೊಂದರೆಗಳಿವೆ ಎಂದು ನನಗೆ ತೋರುತ್ತದೆ. ಸಂದರ್ಭವನ್ನು ಪರಿಗಣಿಸಿ ಈ ನಿರ್ಣಯವನ್ನು ಹಿಂತೆಗೆದುಕೊಳ್ಳುವುದು ಸಾಧ್ಯವಿಲ್ಲವೇ ಅಥವಾ ಅಪೇಕ್ಷಣೀಯವಲ್ಲವೇ ಎಂದು ಅವರು ಪರಿಗಣಿಸಬೇಕೆಂದು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ ಸಚ್ಚಿದಾನಂದ ಸಿನ್ಹ) : ನಿಮ್ಮಲ್ಲಿ ಕ್ಷಮೆ ಕೋರುತ್ತೇನೆ. ನೀವು ಏನು ಹೇಳುತ್ತಿದ್ದೀರೋ ನನಗೆ ಅರ್ಥವಾಗಲಿಲ್ಲ.

**ಶ್ರೀ ಬಿಶ್ವನಾಥ್ ದಾಸ್** : ಈ ನಿರ್ಣಯದ ಯಥಾರ್ಥ ಕಾರ್ಯನಿರ್ವಹಣೆಯಲ್ಲಿ, ನಾನು ಕಂಡಂತೆ, ಕೆಲವು ತೊಂದರೆಗಳನ್ನು ಸೂಚಿಸಲು ಉದ್ದೇಶಿಸಿದ್ದೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಬೇರೆ ಮಾತುಗಳಲ್ಲಿ ಹೇಳುವುದಾದರೆ, ನಿರ್ಣಯವನ್ನು ಈಗಿರುವಂತೆ ಕರಡು ರಚನೆ ಮತ್ತು ಮಂಡನೆಗೆ ನೀವು ಆಕ್ಷೇಪಿಸುತ್ತಿದ್ದೀರಿ.

**ಶ್ರೀ ಬಿಶ್ವನಾಥ್ ದಾಸ್** : ಹೌದು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನೇರವಾಗಿ ಪ್ರಸ್ತಾವವನ್ನು ವಿರೋಧಿಸುತ್ತಿದ್ದೀರಿ? ಗೌರವಾನ್ವಿತ ಸೂಚಕರು ಅದನ್ನು ಗಮನಿಸುತ್ತಾರೆ ಎಂದು ಭಾವಿಸುತ್ತೇನೆ. ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ಮಂಡಿಸಿದ ನಿರ್ಣಯವನ್ನು ಅನುಷ್ಠಾನಕ್ಕೆ ತರುವಲ್ಲಿ ಕೆಲವು ತೊಂದರೆಗಳು ಎದುರಾಗುತ್ತವೆ ಎಂದು ಮಾತನಾಡುವವರು ಮುಂಗಾಣುತ್ತಿದ್ದಾರೆ. ಆದ್ದರಿಂದ ಅವರು 'ವಿರೋಧಿಸು' ಎಂಬ ಶಬ್ದವನ್ನು ಬಳಸದಿದ್ದರೂ, ವಾಸ್ತವದಲ್ಲಿ ಈ ನಿರ್ಣಯವನ್ನು ವಿರೋಧಿಸುತ್ತಿದ್ದಾರೆ.

**ಶ್ರೀ ಬಿಶ್ವನಾಥ್ ದಾಸ್** : ನನ್ನ ಸ್ವಭಾವಕ್ಕೆ ತೀರ ರೂಢಿಯಲ್ಲಿಲ್ಲದ ಕೆಲಸವನ್ನು ಕೈಗೆತ್ತಿಕೊಳ್ಳಬೇಕಾದುದಕ್ಕೆ ನಾನು ಬಹಳ ವಿಷಾದಿಸುತ್ತೇನೆ. ಕಾರ್ಯಕಾರಿ ಸಮಿತಿ ಮತ್ತು ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು ನೀಡಿದ ನಾಯಕತ್ವಕ್ಕೆ ನಾನು ಒಬ್ಬ ಮೌನ ಬೆಂಬಲಿಗನಾಗಿದ್ದೇನೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳಬೇಕಾದ ಅಗತ್ಯವಿದೆಯೆ? ಆದರೆ ಈ ನಿರ್ಣಯಕ್ಕೆ ಪ್ರಾಯೋಗಿಕ ಅನ್ವಯವನ್ನು ನೀಡುವಲ್ಲಿ ಕೆಲವು ತೊಂದರೆಗಳು ನನಗೆ ತೋರುತ್ತವೆ. ಅದು ಎರಡು ಅಥವಾ ಮೂರು ಸಂಗತಿಗಳನ್ನು ಪ್ರಸ್ತಾವಿಸುತ್ತದೆ. ಮೊದಲನೆಯದಾಗಿ, ಅದು ಹೀಗೆ ಹೇಳುತ್ತದೆ, "ಅಧ್ಯಕ್ಷರು ತಮ್ಮ ಸಂಪೂರ್ಣ ವಿವೇಚನೆಯಲ್ಲಿ ಅನುಮತಿಸಬಹುದಾದ ಕೆಲವು ಮಾರ್ಪಾಡುಗಳೊಡನೆ"; ಎರಡನೆಯದಾಗಿ, ಅದು ಹೀಗೆ ಹೇಳುತ್ತದೆ, "ಕೇಂದ್ರಿಯ ಶಾಸನಸಭೆಯ ನಿಯಮಗಳಿಗೆ ಅನ್ವಯವನ್ನು ಕೊಡಬಹುದು." ಮಾನ್ಯರೆ, ಮೊದಲನೆಯದಾಗಿ,

ನಿಯಮಗಳ ಸಮಿತಿಯನ್ನು ಕ್ಷಿಪ್ರವಾಗಿಯೇ ನೇಮಿಸಲಾಗುತ್ತದೆ. ತೀರ ಹೆಚ್ಚೆಂದರೆ ಕೇವಲ ಎರಡು ಅಥವಾ ಮೂರು ದಿನಗಳಲ್ಲಿ ಅದು ನಿಯಮಗಳನ್ನು ರಚಿಸಿ ಈ ಸಭೆಯ ಮುಂದಿಡುತ್ತದೆ ಎಂದು ನಾನು ನಂಬುತ್ತೇನೆ. ಈ ಮಧ್ಯೆ ನಾವು ಮುಖ್ಯವಾದ ವ್ಯವಹಾರವನ್ನೇನು ನಡೆಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಈ ತಾತ್ಕಾಲಿಕ ಪ್ರಸ್ತಾವಗಳನ್ನು ಅನ್ವಯಿಸುವಾಗ ಅನೇಕ ಕ್ರಿಯಾಲೋಪಗಳು ಉದ್ಭವಿಸುವುದು ಖಚಿತವಾಗಿದ್ದರೂ, ಈ ಪ್ರಸ್ತಾವಗಳು ಅಷ್ಟೇನೂ ಹೆಚ್ಚು ಪ್ರಯೋಜನಕಾರಿಯಾಗಿರುವುದಿಲ್ಲ.

ಮೇಲಾಗಿ, ಮಾನ್ಯರೆ, ಈ ನಿರ್ಣಯವು ಅಧ್ಯಕ್ಷರ ವಿವೇಚನೆಗೆ ಬಹಳ ಸಂಗತಿಗಳನ್ನು ಬಿಟ್ಟಿದೆ. ಇಡೀ ಸಂಗತಿಯನ್ನು ಅಂದರೆ ಈ ವ್ಯವಹಾರದ ಸಂಪೂರ್ಣ ನಿಯಂತ್ರಣವನ್ನು ಎರಡು ಮೂರು ದಿನಗಳ ಕಾಲ ಅಧ್ಯಕ್ಷರಿಗೇ ವಹಿಸಿಕೊಡುವುದು ಅಪೇಕ್ಷಣೀಯವೇ ಮತ್ತು ನ್ಯಾಯಯುತವೇ ಎಂದು ಪರಿಗಣಿಸಲು ನನ್ನ ನಾಯಕರಿಗೆ ನಾನು ಮನವಿ ಮಾಡಿಕೊಳ್ಳುತ್ತೇನೆ. ಈ ಅವಧಿಯಲ್ಲಿ ಕ್ರಮವಾದ ನಿಯಮಗಳನ್ನು ರಚಿಸಿ ಸಭೆಯ ಮುಂದೆ ಮಂಡಿಸಲಾಗುತ್ತದೆ. ನಾನು ಸಲಹೆ ಮಾಡುವುದೇನೆಂದರೆ, ಈ ಮಧ್ಯೆ ಸಭೆಯು ಏನಾದರೂ ವ್ಯವಹಾರವನ್ನು ಮಾಡಬೇಕೆಂದು ಪ್ರಸ್ತಾವಿಸಿದರೆ, ಅಧ್ಯಕ್ಷರು ತಮ್ಮ ಸಂಪೂರ್ಣ ವಿವೇಚನೆಯನ್ನು ಬಳಸಿ ಆ ಕಾರ್ಯವನ್ನು ನಿಯಂತ್ರಿಸಲಿ, ಹೇಗೂ ನಿರ್ಣಯದಲ್ಲೇ ಅದಕ್ಕೆ ಅನುಮತಿಯನ್ನು ನೀಡಲಾಗಿದೆ.

ಮೂರನೆಯದಾಗಿ, ನಮಗೆ ಕೇಂದ್ರೀಯ ಶಾಸನಸಭೆಯ ಕಾರ್ಯವಿಧಾನಗಳು, ನಿಯಮಗಳು ಮತ್ತು ಸ್ಥಾಯೀ ಸಮಿತಿಯ ಆದೇಶಗಳನ್ನು ತಿಳಿದುಕೊಳ್ಳುವುದು ಕಷ್ಟ. ನನ್ನ ಬಗೆಗೇ ಹೇಳುವುದಾದರೆ ನನಗೇ ಗೊತ್ತಿಲ್ಲ ಮತ್ತು ಇಲ್ಲಿರುವ ಅನೇಕ ಗೌರವಾನ್ವಿತ ಸದಸ್ಯರು ಕೇಂದ್ರೀಯ ಶಾಸನಸಭೆಯ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಸಂಪೂರ್ಣವಾಗಿ ಅರಿತಿಲ್ಲ ಎಂದು ನಾನು ನಂಬುತ್ತೇನೆ. ಪ್ರಾಂತ್ಯದಿಂದ ಪ್ರಾಂತ್ಯಕ್ಕೇ ಅನೇಕ ಪ್ರಮುಖ ಸಂಗತಿಗಳಲ್ಲಿ ನಿಯಮಗಳು ಬೇರೆ ಬೇರೆಯಾಗಿರುತ್ತವೆ. ಕೇಂದ್ರೀಯ ಶಾಸನಸಭೆಯ ನಿಯಮಗಳನ್ನು ಪರಿಚಯ ಮಾಡಿಕೊಳ್ಳಲು ಸದಸ್ಯರಿಗೆ ಎರಡು ಅಥವಾ ಮೂರು ದಿನಗಳು ಹಿಡಿಯುತ್ತವೆ. ಗೌರವಾನ್ವಿತ ಸದಸ್ಯರನ್ನು ಈ ಕಷ್ಟಕ್ಕೆ ಗುರಿ ಪಡಿಸುವ ಬದಲು, ಏನಾದರೂ ವ್ಯವಹಾರವಿದ್ದರೆ ಅದನ್ನು ಅಧ್ಯಕ್ಷರಿಗೇ ಬಿಡುವುದು ಉತ್ತಮ ಎಂದು ನಾನು ಭಾವಿಸುತ್ತೇನೆ. ಅಷ್ಟರಲ್ಲಿ ನಮ್ಮ ಸಮಿತಿಯೇ ನಿಯಮಗಳನ್ನು ರಚಿಸುತ್ತದೆ.

ಕೊನೆಯದಾಗಿ, ಮಾನ್ಯರೆ, ಈ ಸಭೆಯ ೨೭೦ ಸದಸ್ಯರಲ್ಲಿ ಪ್ರತಿಯೊಬ್ಬರಿಗೂ ಕೇಂದ್ರೀಯ ಶಾಸನಸಭೆಯ ನಿಯಮಗಳ ಒಂದು ಪ್ರತಿಯನ್ನು ಒದಗಿಸಬೇಕಾಗುತ್ತದೆ. ಕೇಂದ್ರೀಯ ಶಾಸನಸಭೆಯು ಇಷ್ಟು ಕಡಿಮೆ ಕಾಲಾವಧಿಯಲ್ಲಿ ಅಷ್ಟೊಂದು ಪ್ರತಿಗಳನ್ನು ಸರಬರಾಜು ಮಾಡಲು ಸಮರ್ಥವಾಗಿದೆಯೇ ಎಂದು ನನಗೆ ಗೊತ್ತಿಲ್ಲ. ಈ ಅಡಚಣೆಗಳ ದೃಷ್ಟಿಯಿಂದ ಪಂಡಿತ್ ಈ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಂಡು, ನಿರ್ಣಯದಲ್ಲಿ ಪ್ರಸ್ತಾವಿಸಿರುವಂತೆಯೇ, ಸಮಸ್ತ ಆಯ್ಕೆಯನ್ನೂ ಅಧ್ಯಕ್ಷರಿಗೇ ಬಿಟ್ಟುಬಿಡುವುದನ್ನು ಒಪ್ಪಿಕೊಳ್ಳುವುದರಲ್ಲಿ ಯಾವುದೇ ಹಾನಿಯಿಲ್ಲ ಎಂದು ನಾನು ನಂಬುತ್ತೇನೆ. ನಿಮ್ಮ ಮಾತಿನಲ್ಲಿ ಹೇಳಿದಂತೆ ಅದನ್ನು 'ವಿರೋಧಿಸಲು' ನನಗೆ ತುಂಬ ದುಃಖವಾಗುತ್ತಿದೆ ಮಾನ್ಯರೆ, ಆದರೂ ಹಾಗೆ ಮಾಡುವುದು ನನ್ನ ಉದ್ದೇಶವಾಗಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶ್ರೀ ಬಿಶ್ವನಾಥ್ ಅವರಿಗೆ ನಾನು ಸೂಚಿಸಬಹುದಾದದ್ದು ಏನೆಂದರೆ, ಅವರು ಬಳಸಲು ಯಾವುದೇ ಪರಿಭಾಷೆಯು ಸೂಕ್ತವಾಗಿ ಅವರಿಗೆ ತೋರಲಿ, ಅಧ್ಯಕ್ಷನಾಗಿ ನನಗೆ ಅವರ ನಿಲುವನ್ನು ವಿರೋಧ ಎಂದು ಕರೆಯುವುದನ್ನು ಬಿಟ್ಟು ಬೇರೆ ಆಯ್ಕೆ ಇಲ್ಲ.

**ಶ್ರೀ ಬಿಶ್ವನಾಥ್ ದಾಸ್** : ಅದು ಹಾಗಿರಬಹುದು; ಆದರೆ ನಾನು ವಿರೋಧಿಸಬೇಕೆಂಬ ಯಾವುದೇ ಭಾವನೆಯಿಂದ ಮಾತನಾಡಿಲ್ಲ.

**ಶ್ರೀ ಶ್ರೀಪ್ರಕಾಶ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಗೌರವಾನ್ವಿತ ಪಂಡಿತ್ ನೆಹರು ಮಂಡಿಸಿದ ನಿರ್ಣಯವನ್ನು ಬೆಂಬಲಿಸಲು ನಾನು ಇಚ್ಛಿಸುತ್ತೇನೆ. ನನ್ನ ಗೌರವಾನ್ವಿತ ಸ್ನೇಹಿತರಾದ ಶ್ರೀ ಬಿಶ್ವನಾಥ್

ದಾಸ್ ಅವರು ಕೇಂದ್ರೀಯ ಶಾಸನಸಭೆಯ ಸ್ಥಾಯೀ ಆದೇಶಗಳು ಮತ್ತು ನಿಯಮಗಳನ್ನು ಓದಿದರೆ ಅವು ಬಹುತೇಕ ಪರಿಪೂರ್ಣವಾಗಿವೆ ಎಂದು ಅವರಿಗೆ ಕಂಡುಬರುತ್ತವೆ. ಅವುಗಳನ್ನು ಮತ್ತಷ್ಟು ಸುಧಾರಣೆ ಮಾಡಲಾಗುವುದಿಲ್ಲ. ನಮ್ಮದೇ ಸಮಿತಿಯು ಸಭೆ ಸೇರಿ ಈ ವಿಚಾರವಾಗಿ ಪರ್ಯಾಲೋಚಿಸಿದರೆ ಅದರಲ್ಲಿ ಏನೂ ಬದಲಾವಣೆಯನ್ನು ಮಾಡಲಾಗುವುದಿಲ್ಲ ಎಂಬುದನ್ನು ಕಂಡುಕೊಳ್ಳುತ್ತದೆ ಎನ್ನುವುದು ನನಗೆ ಖಚಿತವಾಗಿದೆ. ಮಾನ್ಯರೆ, ನಿಮ್ಮ ಕಾರ್ಯದರ್ಶಿಯವರು ಕೇಂದ್ರೀಯ ಶಾಸನಸಭೆಯ ನಿಯಮಗಳು ಮತ್ತು ಸ್ಥಾಯೀ ಆದೇಶಗಳ ಒಂದು ಪ್ರತಿಯನ್ನು ಗೌರವಾನ್ವಿತ ಸದಸ್ಯರಿಗೆ ಪರಿಚಯಿಸಿದರೆ – ಅದಕ್ಕೇನೂ ಹೆಚ್ಚು ವೆಚ್ಚ ಆಗದು – ಬಿಶ್ವನಾಥ್ ಸಿಂಗ್ ಮತ್ತು ಬೇರೆ ಎಲ್ಲರೂ ಕೇಂದ್ರೀಯ ಶಾಸನಸಭೆಗೆ ಸಾಕಾಗುವಷ್ಟು ನಿಯಮಗಳು ನಮಗೂ ಕೂಡ ಸಾಕಾಗುತ್ತವೆ ಎಂದು ಕಂಡುಕೊಳ್ಳುತ್ತಾರೆ. ನಮ್ಮದೇ ವ್ಯವಹಾರಗಳ ನಿಯಮಗಳನ್ನು ರಚಿಸುವುದಕ್ಕಾಗಿ ನಾವು ಈ ಸಭೆಯ ವ್ಯವಹಾರಗಳನ್ನು ಮುಂದೂಡಿದರೆ ಅದು ಕೇವಲ ಕಾಲವ್ಯಯ ಎಂದೇ ನಾನು ಭಾವಿಸುತ್ತೇನೆ. ನಮ್ಮ ಚರ್ಚೆಯ ಅವಧಿಯಲ್ಲಿ ಉದ್ಭವಿಸಬಹುದಾದ ಎಲ್ಲ ಸಂಭವನೀಯ ಆಕಸ್ಮಿಕಗಳನ್ನು ಈ ನಿಯಮಗಳು ವ್ಯಾಪಿಸುವುದಿಲ್ಲ ಎಂದು ತಾತ್ಕಾಲಿಕ ಅಧ್ಯಕ್ಷರಾದ ಮಾನ್ಯರೆ, ತಮಗೆ ಅನ್ನಿಸಲಾರದು ಎಂದು ನಾನು ಭಾವಿಸುತ್ತೇನೆ. ನಾನು ನನ್ನ ಗೌರವಾನ್ವಿತ ಸ್ನೇಹಿತರಾದ ಪಂಡಿತ್ ಜವಾಹರಲಾಲ್ ನೆಹರು ಅವರನ್ನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶ್ರೀ ಬಿಶ್ವನಾಥ್ ದಾಸ್ ಅವರನ್ನು ಯಾರಾದರೂ ಬೆಂಬಲಿಸುತ್ತಾರೆಯೆ ಎನ್ನುವುದನ್ನು ತಿಳಿದುಕೊಳ್ಳಲು ನಾನು ಹೆಚ್ಚು ಕಾತರನಾಗಿದ್ದೇನೆ. (ನಗು). ನನ್ನ ಕಾತರವಿರುವುದು ಈ ಪ್ರಶ್ನೆಯ ತಾಂತ್ರಿಕ ಅಂಶವನ್ನು ಕುರಿತು. ಶ್ರೀ ಬಿಶ್ವನಾಥ್ ದಾಸ್ ಅವರ ಪ್ರಸ್ತಾವವನ್ನು ಯಾರೂ ಅನುಮೋದಿಸಿಯೂ ಇಲ್ಲ. ಈ ಸಭೆಯ ಪ್ರಚಂಡ ಬಹುಮತದ ಅಭಿಮತ ಏನೆಂದರೆ ಪಂಡಿತ್ ಜವಾಹರ್ ಲಾಲ್ ನೆಹರು ಅವರ ನಿರ್ಣಯವನ್ನು ಅಂಗೀಕರಿಸಬಹುದು ಎಂಬುದಾಗಿ ಎಂದು ಭಾವಿಸುತ್ತೇನೆ.

**ಶ್ರೀ ಎನ್.ವಿ. ಗಾಡ್ಗಿಲ್** (ಬಾಂಬೆ : ಸಾಮಾನ್ಯ) : ನನ್ನದೊಂದು ಪ್ರಾರ್ಥನೆ. ಸಂವಿಧಾನ ರಚನಾಸಭೆಯ ಎಲ್ಲ ಸದಸ್ಯರಿಗೂ ಕೇಂದ್ರೀಯ ಶಾಸನಸಭೆಯ ವ್ಯವಹಾರದ ನಿಯಮಗಳ ಕೈಪಿಡಿ ಮತ್ತು ಸ್ಥಾಯೀ ಆದೇಶಗಳ ಒಂದು ಪ್ರತಿಯನ್ನು ಒದಗಿಸಬೇಕು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಅಷ್ಟೊಂದು ಪ್ರತಿಗಳು ಲಭ್ಯವೇ ಎಂದು ನನಗೆ ಗೊತ್ತಿಲ್ಲ. ನಮ್ಮಲ್ಲಿ ಇರಲಾರದು; ಹೇಗಾದರೂ, ನಿಮ್ಮ ಅಪೇಕ್ಷೆಯನ್ನು ಈಡೇರಿಸಲು ನನ್ನ ಯತ್ನ ಮೀರಿ ಪ್ರಯತ್ನಿಸುತ್ತೇನೆ.

ಈಗ ನಾನು ಪಂಡಿತ್ ನೆಹರು ಅವರ ನಿರ್ಣಯವನ್ನು ಮತಕ್ಕೆ ಹಾಕುತ್ತೇನೆ... ಅದು ಅಂಗೀಕೃತವಾಗಿದೆ ಎಂದು ಘೋಷಿಸುತ್ತೇನೆ.

ಪಂಡಿತ್ ನೆಹರು ಅವರು ಮುಂದಿನ ಆರನೆಯ ನಿರ್ಣಯವನ್ನು ಮಂಡಿಸಬೇಕೆಂದು ಈಗ ಕೇಳಿಕೊಳ್ಳುತ್ತೇನೆ.

## ಅಸ್ತಿತ್ವದಲ್ಲಿರುವ ಸಂವಿಧಾನ ರಚನಾಮಂಡಲಿಯ ಕಚೇರಿಯ ಸಂಸ್ಥೆಯನ್ನು ಸ್ಥಿರೀಕರಣಗೊಳಿಸುವುದು.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಮುಂದಿನ ನಿರ್ಣಯವನ್ನು ಮಂಡಿಸಲು ಅನುಮತಿಯನ್ನು ಕೋರುತ್ತೇನೆ ಸ್ವಾಮಿ, ಏನೆಂದರೆ –

"ಈ ಸಭೆಯ ಅಂತಿಮ ನಿರ್ಣಯವು ಇತ್ಯರ್ಥಕ್ಕೆ ಕಾದಿರುವಾಗ, ಸಂವಿಧಾನ ರಚನಾಸಭೆಯ ಕಚೇರಿಯ ಅಸ್ತಿತ್ವದಲ್ಲಿರುವ ಸಂಸ್ಥೆಯನ್ನು ಈ ಸಭೆಯು ಸ್ಥಿರೀಕರಿಸುತ್ತದೆ."

ಈ ಸಭೆಗೆ ಪ್ರಾಯಃ ತಿಳಿದಿರುವ ಸಂಗತಿ ಏನೆಂದರೆ ಕಳೆದ ಅನೇಕ ತಿಂಗಳುಗಳಿಂದ ಸಂವಿಧಾನ

ರಚನಾಸಭೆಯ ಕಚೇರಿಯು ಕಾರ್ಯನಿರ್ವಹಿಸುತ್ತಿದೆ ಮತ್ತು ಈ ಸಭೆಯು ಸೇರುವ ಮುನ್ನ, ನಮಗೆ ಮುಂಚೆ ನಡೆದ ಎಲ್ಲ ಸಂಗತಿಗಳನ್ನೂ ಸಂಘಟಿಸಿದೆ. ಏನೇ ಆಗಲಿ, ಈ ಸಭೆಯು ಬೇರೆ ತೀರ್ಮಾನಿಸುವ ವರೆಗೂ ಈ ಕಚೇರಿಯು ಮುಂದುವರಿಯಲೇಬೇಕು. ಈ ಸಭೆಯು ನಿಸ್ಸಂಶಯವಾಗಿ ಯಾವುದಾದರೊಂದು ರೀತಿಯ ಕಚೇರಿಯನ್ನು ಹೊಂದಲೇಬೇಕು. ಅದು ಈ ಕಚೇರಿಯನ್ನು ಮುಂದುವರಿಸಲು ನಿರ್ಧರಿಸಬಹುದು. ಇದನ್ನು ವಿಸ್ತರಿಸಲು ಅಥವಾ ಬದಲಾಯಿಸಲು ನಿರ್ಧರಿಸಬಹುದು. ಆದರೆ ಇದಂತೂ ಮುಂದುವರಿಯಲೇಬೇಕು. ನನ್ನ ನಿರ್ಣಯುವು, ಈ ಸಭೆಯು ಬೇರೆ ತೀರ್ಮಾನಕ್ಕೆ ಬರುವವರೆಗೂ ಈ ಕಚೇರಿಯು ಮುಂದುವರಿಯುವುದನ್ನು ಕಾನೂನುಬದ್ಧಗೊಳಿಸಲು ಒಂದು ಸಾಧನವಾಗಿದೆ. ಮಂಡಿಸಲು ಅನುಮತಿಯನ್ನು ಕೋರುತ್ತೇನೆ ಸ್ವಾಮಿ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈ ನಿರ್ಣಯವನ್ನು ಅನುಮೋದಿಸಲಾಗಿದೆಯೇ?

**ಗೌರವಾನ್ವಿತ ಶ್ರೀ ಎಮ್. ಅಸಫ್ ಅಲಿ** (ದೆಹಲಿ) : ಪಂಡಿತ್ ನೆಹರು ಅವರ ಈ ನಿರ್ಣಯವನ್ನು ಅನುಮೋದಿಸಲು ನನಗೆ ಅಪಾರವಾದ ಸಂತೋಷವಾಗುತ್ತದೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಇದನ್ನು ಮತಕ್ಕೆ ಹಾಕಲು ನನಗೆ ಅಪಾರವಾದ ಸಂತೋಷವಾಗುತ್ತದೆ. (ನಗು). ನಗುವಿಗೆ ಪ್ರಚೋದನೆ ಕೊಡದೆ ಯಾವುದೇ ಅಭಿಪ್ರಾಯವನ್ನು ತಿಳಿಸಲು ನನಗೆ ಅರ್ಹತೆಯಿಲ್ಲವೆ? (ಮತ್ತೆ ನಗು)

ಪಂಡಿತ್ ನೆಹರು, ನಿಮ್ಮ ಅಭಿಪ್ರಾಯಗಳನ್ನು ನಾನು ಬೆಂಬಲಿಸುತ್ತಾ ಹೇಳಬಯಸುವುದೇನೆಂದರೆ, ಸರ್ ಬಿ.ಎನ್. ರಾವ್ ಮತ್ತು ಅವರ ಸಿಬ್ಬಂದಿಯೊಡನೆ ಕಳೆದ ಕೆಲವು ದಿನಗಳಿಂದ ಕೆಲಸ ಮಾಡುವ ಸುಯೋಗ ನನಗೆ ಪ್ರಾಪ್ತವಾಗಿತ್ತು, ನನಗೆ ಅತ್ಯುತ್ತಮವಾದ ಸಹಾಯ ಅವರಿಂದ ದೊರೆಯಿತು. ನನ್ನ ಉತ್ತರಾಧಿಕಾರಿಗೂ ಕೂಡ ಅದೇ ರೀತಿಯ ಮೌಲಿಕವಾದ ನೆರವನ್ನು ಮುಂದುವರಿಸುತ್ತಾರೆ ಎಂದು ನಾನು ದೃಢವಾಗಿ ನಂಬಿದ್ದೇನೆ.... ಈ ನಿರ್ಣಯವು ಅಂಗೀಕೃತವಾಗಿದೆ ಎಂದು ನಾನು ಘೋಷಿಸುತ್ತೇನೆ.

ಆಚಾರ್ಯ ಕೃಪಲಾನಿ ಅವರು ಈಗ ಏಳನೆಯ ನಿರ್ಣಯವನ್ನು ಮಂಡಿಸುತ್ತಾರೆ.

## ವಿಧಾನಗಳ ನಿಯಮದ ಸಮಿತಿ

**ಆಚಾರ್ಯ ಜೆ.ಬಿ. ಕೃಪಲಾನಿ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯರೆ, ನಾವು ಇಲ್ಲಿ ವಿಧಾನಗಳ ನಿಯಮಗಳಿಲ್ಲದೆ ಸಭೆ ಸೇರಿದ್ದೇವೆ. ಆದ್ದರಿಂದ ಪಂಡಿತ್ ಜವಾಹರಲಾಲ್ ನೆಹರು ಅವರು ತಮ್ಮ ಮೊದಲನೆಯ ನಿರ್ಣಯವನ್ನು ಮಂಡಿಸಿದರು. ಇದರಿಂದಾಗಿ ನಾವು ನಮ್ಮದೇ ಆದ ನಿಯಮಗಳನ್ನು ಮಾಡಿಕೊಳ್ಳಲು ಸಮರ್ಥರಾಗುವವರೆಗೂ ಕೇಂದ್ರೀಯ ಶಾಸನಸಭೆಯಲ್ಲಿ ವ್ಯವಹಾರಗಳನ್ನು ನಡೆಸಲು ಅನ್ವಯವಾಗುತ್ತಿರುವ ನಿಯಮಗಳನ್ನು, ನಮ್ಮದೇ ನಿಯಮಗಳನ್ನು ಮಾಡಿಕೊಳ್ಳುವ ಮೊದಲು, ನಾವು ಇಲ್ಲಿ ಚರ್ಚಿಸುವ ಯಾವುದೇ ನಿರ್ಣಯಕ್ಕೆ ಅನ್ವಯ ಮಾಡಿಕೊಳ್ಳಬಹುದು. ಈ ನಿಯಮಗಳು ಬಹಳ ಜಾಗರೂಕವಾದ ಪರಿಗಣನೆಯನ್ನು ಬೇಡುತ್ತವೆ. ಈ ಉದ್ದೇಶಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಬೇಕು ಎಂದು ನಾನು ಪ್ರಸ್ತಾವಿಸುತ್ತಿದ್ದೇನೆ. ಆದ್ದರಿಂದ ನಾನು ಮುಂದಿನ ನಿರ್ಣಯವನ್ನು ಮಂಡಿಸಲು ಅವಕಾಶವನ್ನು ಕೋರುತ್ತೇನೆ. ಅದೇನೆಂದರೆ....

"ಈ ಸಭೆಯು ನಿರ್ಣಯಿಸುತ್ತದೆ –

(೧) ಕೆಳಕಂಡ ಸಂಗತಿಗಳನ್ನು ಕುರಿತು ವರದಿಯನ್ನು ನೀಡಲು ಒಬ್ಬರು ಅಧ್ಯಕ್ಷರು ಮತ್ತು ೧೫ ಜನ ಇತರ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ನೇಮಿಸಬೇಕು:

(೨) ಸಭೆಯ ವಿಧಾನಗಳ ನಿಯಮಗಳು."

ನಿಮ್ಮಲ್ಲಿರುವ ಪ್ರತಿಯಲ್ಲಿ 'ವಿಭಾಗಗಳು ಮತ್ತು ಸಮಿತಿಗಳು' ಎಂಬ ಶಬ್ದಗಳಿವೆ. ವಿಭಾಗಗಳು ಮತ್ತು

ಸಮಿತಿಗಳು ಈ ಸಭೆಯ ಭಾಗಗಳಾಗಿವೆ. ಆದ್ದರಿಂದ ಆ ಶಬ್ದಗಳು ಅನಾವಶ್ಯಕ ಎಂದು ನನಗೆ ತೋರುತ್ತವೆ. ಆದ್ದರಿಂದ ಅವುಗಳನ್ನು ನಾನು ತೆಗೆದುಹಾಕಿದ್ದೇನೆ. ಆದ್ದರಿಂದ–

"(ಎ) ಸಭೆಯ ವಿಧಾನಗಳ ನಿಯಮಗಳು;

(ಬಿ) ಅಧ್ಯಕ್ಷರ ಅಧಿಕಾರಗಳು;

(ಸಿ) ಅಧ್ಯಕ್ಷರನ್ನು ಹೊರತು ಪಡಿಸಿ ಇತರ ಪದಾಧಿಕಾರಿಗಳ ನೇಮಕ ಮತ್ತು ಅಧಿಕಾರಗಳೂ ಸೇರಿದಂತೆ ಸಭೆಯ ಕೆಲಸವನ್ನು ಸಂಯೋಜಿಸುವುದು; ಮತ್ತು

(ಡಿ) ಸಮಿತಿಯನ್ನು ಘೋಷಿಸುವುದಕ್ಕೆ ವಿಧಾನ;

(೨) ಅಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿರಬೇಕು;

(೩) ಪರಿಶಿಷ್ಟದಲ್ಲಿ ನಿಗದಿಪಡಿಸಿರುವ ರೀತಿಯಲ್ಲಿ ಸಮಿತಿಯ ಸದಸ್ಯರನ್ನು ಚುನಾಯಿಸಬೇಕು; ಮತ್ತು

(೪) ಆ ವಿಚಾರವಾಗಿ ಸಭೆಯ ತೀರ್ಮಾನವು ಇನ್ನೂ ಇತ್ಯರ್ಥವಾಗದಿರುವಾಗ ಅಧ್ಯಕ್ಷರು –

(ಎ) ಸಭೆಯ ಸದಸ್ಯರ ಭತ್ಯೆಗಳನ್ನು ನಿಗದಿಗೊಳಿಸಬೇಕು;

(ಬಿ) ಭಾರತ ಸರ್ಕಾರದ ಅಥವಾ ಯಾವುದೇ ಪ್ರಾಂತೀಯ ಸರ್ಕಾರದ ಸಿಬ್ಬಂದಿಯನ್ನು ಸಭೆಯ ಸುಪರ್ದಿಗೆ ವಹಿಸಿದಾಗ ಅಂತಹ ಸಿಬ್ಬಂದಿಯ ಸಂಬಳಗಳು ಮತ್ತು ಭತ್ಯೆಗಳನ್ನು ಸಂಬಂಧಪಟ್ಟ ಸರ್ಕಾರಗಳೊಡನೆ ಸಮಾಲೋಚಿಸಿ ನಿಗದಿ ಪಡಿಸಬೇಕು, ಮತ್ತು

(ಸಿ) ಸಭೆಯ ವ್ಯವಹಾರಕ್ಕೆ ನೇಮಕ ಮಾಡಿಕೊಳ್ಳಲಾದ ಇತರ ಎಲ್ಲ ವ್ಯಕ್ತಿಗಳ ಸಂಬಳಗಳು ಮತ್ತು ಭತ್ಯೆಗಳನ್ನು ನಿಗದಿ ಮಾಡಬೇಕು.

**ಪರಿಶಿಷ್ಟ**

೧. ಸಮಿತಿಯ ಸದಸ್ಯರನ್ನು ಏಕಮೇವ ವರ್ಗಾವಣೆ ಮಾಡಬಹುದಾದ ಮತದಿಂದ ಪ್ರಮಾಣಾನುಗುಣ ಪ್ರಾತಿನಿಧ್ಯದ ಸೂತ್ರದ ಪ್ರಕಾರ ಚುನಾಯಿಸಬೇಕು. ಕೇಂದ್ರೀಯ ಶಾಸನಸಭೆಯಲ್ಲಿ ಈ ವಿಚಾರವಾಗಿ ಚಾಲ್ತಿಯಲ್ಲಿರುವ ನಿಬಂಧನೆಗಳ ಪ್ರಕಾರ ಸಾಧ್ಯವಾದಷ್ಟು ಮಟ್ಟಿಗೆ ಹತ್ತಿರವಾಗಿ ಈ ಚುನಾವಣೆಯನ್ನು ನಡೆಸಬೇಕು.

೨. ಸಮಿತಿಯ ಸದಸ್ಯರ ಚುನಾವಣೆಯನ್ನು ನಡೆಸಲು (ಅಗತ್ಯವಿದ್ದರೆ) ಒಂದು ದಿನಾಂಕ ಮತ್ತು ಸಮಯವನ್ನು ಅಧ್ಯಕ್ಷರು ಗೊತ್ತುಪಡಿಸಬೇಕು ಮತ್ತು ಅದನ್ನು ಪ್ರಕಟಿಸಬೇಕು.

೩. ಯಾವುದೇ ಸದಸ್ಯನು ಒಬ್ಬ ಸದಸ್ಯನನ್ನು ಅಥವಾ ಸದಸ್ಯರನ್ನು ಸಮಿತಿಯ ಚುನಾವಣೆಗೆ ಸೂಚಿಸಬೇಕೆಂಬ ಅಭಿಲಾಷೆಯನ್ನು ಹೊಂದಿದ್ದರೆ ಅಧಿಸೂಚನೆಯನ್ನು ನೀಡಬಹುದು. ಅಧಿಸೂಚನೆಯನ್ನು ಲಿಖಿತರೂಪದಲ್ಲಿ ಕಾರ್ಯದರ್ಶಿಯನ್ನು ಸಂಬೋಧಿಸಿ ಕೊಡಬೇಕು, ಅಧಿಸೂಚನೆ ನೀಡುವ ಸದಸ್ಯನು ಸಹಿ ಮಾಡಿರಬೇಕು ಮತ್ತು ಅಧ್ಯಕ್ಷರು ನಿಗದಿ ಪಡಿಸುವ ದಿನಾಂಕದಂದು ಮಧ್ಯಾಹ್ನ ೧೨ ಗಂಟೆಯೊಳಗೆ ಅಧಿಸೂಚನೆಯನ್ನು ಕಚೇರಿಗೆ ಸಲ್ಲಿಸಬೇಕು. ಅಧಿಸೂಚನೆಯನ್ನು ನೀಡುವ ಸದಸ್ಯನು ತಾನು ಪ್ರಸ್ತಾವಿಸುವ ಸದಸ್ಯರು ಚುನಾಯಿತರಾದರೆ ಸೇವೆ ಸಲ್ಲಿಸಲು ಸಮ್ಮತಿಸುತ್ತಾರೆ ಎಂದು ಸ್ವತಃ ಖಚಿತ ಪಡಿಸಿಕೊಳ್ಳಬೇಕು."

ಇದರ ಅನಂತರ ನಾನು ಇನ್ನೊಂದು ಕಂಡಿಕೆಯನ್ನು ಸೇರಿಸಿದ್ದೇನೆ. ಅದು ಹೀಗಿದೆ : ಅದನ್ನು ನಿಮ್ಮೊಡನಿರುವ ಕಾಗದದಲ್ಲಿ ಕೊಡಲಾಗಿಲ್ಲ. ಆದರೆ ಅದನ್ನು ಸೇರಿಸಿಕೊಳ್ಳಬಹುದು:

"ಅಧ್ಯಕ್ಷರು ನಿಗದಿ ಪಡಿಸಿದ ಸಮಯದ ಒಳಗೆ ಯಾರಾದರೂ ಅಭ್ಯರ್ಥಿ ತನ್ನ ಹೆಸರನ್ನು ಹಿಂಪಡೆಯಬೇಕೆಂದು ಬಯಸಿದರೆ ಹಾಗೆ ಮಾಡಲು ಅವರು ಸ್ವತಂತ್ರರಾಗಿರುತ್ತಾರೆ.

೪. ಈ ರೀತಿಯಲ್ಲಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಸಂಖ್ಯೆಯು ತುಂಬಬೇಕಾದ ಖಾಲಿ ಸ್ಥಾನಗಳ ಸಂಖ್ಯೆಗಿಂತ ಕಡಮೆಯಾಗಿದ್ದರೆ, ಅಧ್ಯಕ್ಷರು ಮತ್ತಷ್ಟು ಅವಧಿಯನ್ನು ನಿಗದಿ ಮಾಡುತ್ತಾರೆ. ಅಷ್ಟರೊಳಗೆ ಪೂರ್ವೋಕ್ತ ಅಧಿಸೂಚನೆಗಳನ್ನು ಕೊಡಬಹುದು. ಹೀಗೆ ತುಂಬಬೇಕಾದ ಖಾಲಿ ಸ್ಥಾನಗಳ ಸಂಖ್ಯೆಗಿಂತ ಅಭ್ಯರ್ಥಿಗಳ ಸಂಖ್ಯೆಯು ಕಡಮೆಯಾಗಿಲ್ಲ ಎನ್ನುವವರೆಗೆ ಹೆಚ್ಚುವರಿ ಮತ್ತಷ್ಟು ಅವಧಿಗಳನ್ನು ನಿಗದಿ ಮಾಡುತ್ತಾ ಹೋಗಬಹುದು.

೫. ನಾಮನಿರ್ದೇಶಿತರಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆಯು ತುಂಬಬೇಕಾದ ಖಾಲಿ ಸ್ಥಾನಗಳ ಸಂಖ್ಯೆಗೆ ಸಮವಾಗಿದ್ದರೆ, ಅಭ್ಯರ್ಥಿಗಳು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆ ಎಂದು ಅಧ್ಯಕ್ಷರು ಘೋಷಿಸುತ್ತಾರೆ.

೬. ನಾಮನಿರ್ದೇಶಿತರಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆಯು ತುಂಬಬೇಕಾದ ಖಾಲಿ ಸ್ಥಾನಗಳಿಗಿಂತ ಹೆಚ್ಚಾಗಿದ್ದರೆ, ನಿಯಮ (೧)ರಲ್ಲಿ ನಿಗದಿ ಪಡಿಸಿರುವ ರೀತಿಯಲ್ಲಿ ಒಂದು ಚುನಾವಣೆಯನ್ನು ನಡೆಸಬೇಕಾಗುತ್ತದೆ.

೭. ಈ ನಿಯಮಗಳ ಉದ್ದೇಶಕ್ಕಾಗಿ, ಒಬ್ಬ ಸದಸ್ಯ ಮತ್ತು ಅವನ ಸೂಚಕರು ಸಭೆಯ ಸದಸ್ಯರಾಗಿ ಸಭೆಯ ದಾಖಲಾತಿ ಪುಸ್ತಕದಲ್ಲಿ ಸಹಿ ಮಾಡಿಲ್ಲದಿದ್ದರೆ, ಒಬ್ಬ ಸದಸ್ಯರನ್ನು ಕ್ರಮಬದ್ಧವಾಗಿ ನಾಮನಿರ್ದೇಶಿತನೆಂದು ಅಥವಾ ಮತ ಚಲಾಯಿಸಲು ಅರ್ಹನೆಂದು ಪರಿಗಣಿಸಲಾಗುವುದಿಲ್ಲ."

**ಒಬ್ಬರು ಗೌರವಾನ್ವಿತ ಸದಸ್ಯರು** : ಈ ನಾಮನಿರ್ದೇಶನಗಳಿಗೆ ಅನುಮೋದಕರು ಬೇಕಾಗಿಲ್ಲವೆ? ಇಲ್ಲಿ ಹೇಳಿರುವುದೆಲ್ಲ ಸೂಚಕ ಮತ್ತು ಅಭ್ಯರ್ಥಿ ಮಾತ್ರ.

**ರಾಯ್ ಬಹಾದೂರ್ ಶ್ಯಾಮನಂದನ ಸಹಾಯ** (ಬಿಹಾರ್ : ಸಾಮಾನ್ಯ) : ಈಗಷ್ಟೇ ಪ್ರಸ್ತಾವಿಸಲಾದ ನಿಯಮಗಳಲ್ಲಿ ಅನುಮೋದಕರನ್ನು ಸೇರಿಸಿಲ್ಲ. ಈ ನಾಮನಿರ್ದೇಶನಗಳಿಗೆ ಅನುಮೋದಕರ ಅಗತ್ಯವಿದೆಯೇ ಅಥವಾ ಒಬ್ಬ ಸೂಚಕರಷ್ಟೇ ಸಾಕೆ ಎಂದು ನಾನು ಸ್ಪಷ್ಟಪಡಿಸಿಕೊಳ್ಳಲು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಸಮಿತಿಯ ಚುನಾವಣೆಗೆ ಮಾಡಬೇಕಾದ ನಾಮನಿರ್ದೇಶನಗಳಿಗೆ ಒಬ್ಬ ಸೂಚಕ ಮಾತ್ರ ಸಾಕೆ ಅಥವಾ ಒಬ್ಬರು ಅನುಮೋದಕರೂ ಬೇಕೆ ಎಂದು ರಾಯ್ ಬಹಾದೂರ್ ಶ್ಯಾಮನಂದನ ಸಹಾಯ ಅವರು ತಿಳಿದುಕೊಳ್ಳಲು ಬಯಸುತ್ತಾರೆ.

**ಆಚಾರ್ಯ ಜೆ.ಬಿ. ಕೃಪಲಾನಿ** : ಮಾನ್ಯರೆ, ಅನುಮೋದಕರ ಅಗತ್ಯವಿಲ್ಲ.

**ಮಾನ್ಯ ಅಧ್ಯಕ್ಷರು** : (ಡಾ. ಸಚ್ಚಿದಾನಂದ ಸಿನ್ಹ) : ಬಹಳ ಒಳ್ಳೆಯದು.

**ಮಿ. ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ನಾನು ಅರಿಕೆ ಮಾಡಿಕೊಳ್ಳುತ್ತೇನೆ ಮಾನ್ಯರೆ, ಇಲ್ಲೂ ಕೂಡ ಒಂದು ಬಹಳ ಗಂಭೀರವಾದ ಲೋಪ ಚುನಾವಣಾ ಅಹವಾಲುಗಳ ವಿಲೇವಾರಿಗೆ ಸಂಬಂಧಿಸಿದಂತೆ ಆಗಿದೆ. ಗೌರವಾನ್ವಿತ ಸದಸ್ಯರು ಚುನಾವಣೆಗೆ ಸವಾಲು ಹಾಕಿದರೆ, ಅಂತಹ ಚುನಾವಣಾ ಅಹವಾಲುಗಳನ್ನು ವಿಲೇವಾರಿ ಮಾಡಲು ಈ ಸಭೆಯು ಒಂದು ನ್ಯಾಯಾಧಿಕರಣವನ್ನು ನೇಮಿಸಬೇಕು ಎನ್ನುವುದು ನನ್ನ ಅಭಿಪ್ರಾಯ. ಮಾನ್ಯರೆ, ಉದಾಹರಣೆಗೆ, ನಿನ್ನೆ ಬಲೂಚಿಸ್ತಾನದ ಚುನಾವಣೆಗೆ ಸವಾಲೆಸೆಯಲಾಗಿದೆ. ಅದು ನಿನ್ನೆಯ ಕಾರ್ಯಸೂಚಿಯಲ್ಲಿತ್ತು. ಆದರೆ ಒಂದು ನ್ಯಾಯಾಧಿಕರಣವನ್ನು ನೇಮಿಸಲು ಅವಕಾಶವನ್ನು ಒದಗಿಸಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನನ್ನ ತಿಳಿವಳಿಕೆಯ ಪ್ರಕಾರ ಸಮಿತಿಯು ಆ ಉದ್ದೇಶಕ್ಕಾಗಿ ಕೆಲವು ನಿಯಮಗಳನ್ನು ರಚಿಸುತ್ತದೆ. ಚುನಾವಣೆಯ ವಿಭಾಗಗಳನ್ನು ಉದ್ದೇಶಿಸಿಯೂ ಅವರು ನಿಯಮಗಳನ್ನು ರಚಿಸಬೇಕು ಎನ್ನುವುದನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಬೇಕು ಎಂದು ನಾನು ಅವರಿಗೆ ಸಲಹೆ ಮಾಡಿದ್ದೇನೆ.

**ಡಾ. ಸುರೇಶ್ಚಂದ್ರ ಬ್ಯಾನರ್ಜಿ** (ಬಂಗಾಳ : ಸಾಮಾನ್ಯ) : ಈ ನಿಯಮಗಳು ವಿಭಾಗಗಳಿಗೂ ಅನ್ವಯವಾಗಬೇಕು ಎನ್ನುವುದು ಮಂಡಿಸಿದವರ ಅಭಿಪ್ರಾಯವೇ? ನನ್ನ ಅಭಿಪ್ರಾಯದಲ್ಲಿ 'ವಿಭಾಗ'ವನ್ನು ಇಲ್ಲಿ ನಿರ್ದಿಷ್ಟವಾದ ರೀತಿಯಲ್ಲಿ ಪ್ರಸ್ತಾವಿಸಬೇಕು, ಏಕೆಂದರೆ ನಿಮಗೆ ತಿಳಿದಿರುವಂತೆ ಕೆಲವು ನಿರ್ದಿಷ್ಟ ವಿಭಾಗಗಳಲ್ಲಿ ತೊಂದರೆಗಳಿವೆ.

**ಡಾ. ಶ್ಯಾಮಪ್ರಸಾದ ಮುಖರ್ಜಿ** (ಬಂಗಾಳ : ಸಾಮಾನ್ಯ) : ಡಾ. ಸುರೇಶ್ಚಂದ್ರ ಬ್ಯಾನರ್ಜಿ ಅವರು ಮಾಡಿದ ಪ್ರಸ್ತಾವಕ್ಕೆ ನಾನೂ ಕೂಡ ಬೆಂಬಲ ನೀಡುತ್ತೇನೆ. ಅದನ್ನು ಅಂಗೀಕರಿಸುವುದು ಸುರಕ್ಷಿತ ಎಂದು ನನ್ನ ಭಾವನೆ. ನಿಯಮಗಳ ಸಮಿತಿಯು ವಿಭಾಗಗಳು ಮತ್ತು ಸಮಿತಿಗಳ ನಿಯಮಗಳನ್ನೂ ರಚಿಸುತ್ತದೆ ಎನ್ನುವುದು ಮಂಡನೆಕಾರರ ಉದ್ದೇಶವಾಗಿದ್ದರೆ, ನಿರ್ಣಯದಲ್ಲಿ ವಿಭಾಗಗಳು ಮತ್ತು ಸಮಿತಿಗಳು ಎನ್ನುವುದನ್ನು ನಿರ್ದಿಷ್ಟವಾಗಿ ಸೇರಿಸಬೇಕು ಎನ್ನುವುದು ಅಪೇಕ್ಷಣೀಯ. ಆಗ ಅದರ ಶೀರ್ಷಿಕೆ ಹೀಗಾಗುತ್ತದೆ: "ವಿಭಾಗಗಳು ಮತ್ತು ಸಮಿತಿಗಳೂ ಸೇರಿದಂತೆ ಸಭೆಯ ವಿಧಾನಗಳ ನಿಯಮಗಳು."

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಡಾ. ಶ್ಯಾಮಪ್ರಸಾದ ಮುಖರ್ಜಿ ಅವರು ನಿಮಗೆ ಒಂದು ಸಲಹೆಯನ್ನು ಮಾಡುತ್ತಿದ್ದಾರೆ. ನೀವು ದಯವಿಟ್ಟು ಅವರ ಪ್ರಸ್ತಾವವನ್ನು ಒಪ್ಪಿಕೊಂಡು ಅಲ್ಲಿ ಒಂದು ಶಬ್ದವನ್ನು ಸೇರಿಸಿ.

**ಆಚಾರ್ಯ ಜೆ.ಬಿ.ಕೃಪಲಾನಿ** : ಮಾನ್ಯರೆ, ಸಭೆಯ ವಿಧಾನಗಳ ನಿಯಮಗಳು, ವಿಭಾಗಗಳು ಮತ್ತು ಸಮಿತಿಗಳ ನಿಯಮಗಳನ್ನೂ ಒಳಗೊಳ್ಳುತ್ತವೆ ಎಂದು ನಾನು ಭಾವಿಸುತ್ತೇನೆ. ಸಭೆಯ ಮುಂದೆ ನಾನು ಮಂಡಿಸಿದ ಕರಡಿನಲ್ಲಿ ಈ ಅನಾವಶ್ಯಕವಾದ ಸೇರ್ಪಡೆಯನ್ನು ಏಕೆ ಮಾಡಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ.

**ಡಾ. ಶ್ಯಾಮಪ್ರಸಾದ ಮುಖರ್ಜಿ** : ಮಾನ್ಯರೆ, ಇಲ್ಲಿ 'ವಿಭಾಗಗಳು ಮತ್ತು ಸಮಿತಿಗಳೂ ಸೇರಿದಂತೆ' ಎಂಬ ಶಬ್ದಗಳನ್ನು ಸೇರಿಸಬೇಕಾದದ್ದು ಅತ್ಯಾವಶ್ಯಕ ಎನ್ನುವುದನ್ನು ನಾನು ಸ್ವಲ್ಪ ವಿವರಿಸಲೆ? ವಿಭಾಗೀಯ ಸಭೆಗಳು ಸೇರಿದಾಗ ಪ್ರತಿಯೊಂದೂ ತನ್ನದೇ ಆದ ವಿಧಾನಗಳ ನಿಯಮಗಳನ್ನು ರಚಿಸಿಕೊಳ್ಳಬಹುದು. ಆಗ ಸಂವಿಧಾನ ರಚನಾಸಭೆಯು ವಿಭಾಗಗಳಿಗೆ ವಿಧಾನಗಳ ನಿಯಮಗಳನ್ನು ರಚಿಸುವ ಅಧಿಕಾರವನ್ನು ಹೊಂದಿದೆಯೇ ಎಂಬ ಪ್ರಶ್ನೆ ಏಳಬಹುದು. ಆಗ ನಿಯಮಗಳನ್ನು ರಚಿಸಲು ನಿಯಮಗಳ ಸಮಿತಿಗೆ ಅಧಿಕಾರವನ್ನು ಕೊಟ್ಟ ನಿರ್ಣಯವನ್ನು ಪರಾಮರ್ಶಿಸಬೇಕಾಗುತ್ತದೆ. ಆಗ ಅಲ್ಲಿ ದೊರೆಯುವ ಒಂದೇ ಒಂದು ಪ್ರಸ್ತಾವವು ಏನೆಂದರೆ ಈ ಸಮಿತಿಯನ್ನು ಸಭೆಯ ವಿಧಾನಗಳ ನಿಯಮಗಳನ್ನು ರಚಿಸಲು ನೇಮಿಸಲಾಗಿದೆ ಎಂಬ ಉಲ್ಲೇಖ. ಆಗ ನಿಯಮಗಳ ಸಮಿತಿಯು ವಿಭಾಗಗಳ ನಿಯಮಗಳನ್ನು ರಚಿಸಲು ಅಧಿಕಾರವನ್ನು ಹೊಂದಿದೆಯೇ ಎಂಬುದನ್ನು ~~ಅರ್ಥೈಸುವ~~ ಪ್ರಶ್ನೆ ಏಳುತ್ತದೆ. ನಿಯಮಗಳ ಸಮಿತಿಯು ವಿಭಾಗಗಳಿಗೂ ಕೂಡ ನಿಯಮಗಳನ್ನು ರಚಿಸುತ್ತದೆ ಎನ್ನುವುದು ನಿಮ್ಮ ಉದ್ದೇಶವಾಗಿದ್ದರೆ 'ವಿಭಾಗಗಳು ಮತ್ತು ಸಮಿತಿಗಳೂ ಸೇರಿದಂತೆ' ಎಂದು ನಿರ್ದಿಷ್ಟವಾಗಿ ಅಲ್ಲಿ ಏಕೆ ಸೇರಿಸಬಾರದು. ಹಾಗಾದಾಗ ವಿಭಾಗಗಳು ತಮ್ಮ ಕೆಲಸವನ್ನು ಪ್ರಾರಂಭಿಸಿದಾಗ ಯಾವುದೇ ಸಂದಿಗ್ಧಾರ್ಥವಾಗಲಿ ಅಥವಾ ಅನುಮಾನವಾಗಲಿ ಇರುವುದಿಲ್ಲ.

**ಗೌರವಾನ್ವಿತ ಶ್ರೀ ಪುರುಷೋತ್ತಮದಾಸ್ ಟಂಡನ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಡಾ. ಮುಖರ್ಜಿ ಅವರ ತಿದ್ದುಪಡಿಯನ್ನು ನಾನು ಬೆಂಬಲಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಅವರು ಒತ್ತಿ ಹೇಳುತ್ತಿರುವಂತೆ ಅರ್ಥವು ಇನ್ನೂ ಸ್ಫುಟವಾಗುವಂತೆ ಮಾಡಲು ಅಲ್ಲಿ 'ಸೇರಿದಂತೆ' ಎಂಬ ಶಬ್ದವನ್ನು ಪ್ರತಿಯಾಗಿ ಬಳಸಲು ಅಥವಾ ಸೇರಿಸಲು ನಿಮ್ಮದೇನಾದರೂ ಆಕ್ಷೇಪವಿದೆಯೆ?

**ಆಚಾರ್ಯ ಜೆ.ಬಿ. ಕೃಪಲಾನಿ** : ವಿಭಾಗಗಳಿಗೆ ಹೆಚ್ಚುವರಿ ನಿಯಮಗಳು ಅಗತ್ಯವೆಂದಾದರೆ, ಇಡೀ ಸಭೆಯ ನಿಯಮಗಳಿಗೆ ಅಸಂಗತವಾದ ಯಾವುದೇ ನಿಯಮಗಳನ್ನು ವಿಭಾಗಗಳು ಮಾಡುವುದಿಲ್ಲ ಎಂದು ರೂಪಿಸಲಾಗುವುದು ಎಂದು ನಾನು ಭಾವಿಸುತ್ತೇನೆ. ನನ್ನ ಅರಿಕೆಯೇನೆಂದರೆ, ಮಾನ್ಯರೆ, ಈ ನಿಯಮಗಳ

ಸಮಿತಿಯು ವಿಶಾಲ ಸ್ವರೂಪದ ಸಾಮಾನ್ಯ ನಿಯಮಗಳನ್ನು ಮಾಡುತ್ತದೆ ಮತ್ತು ಇವು ವಿಭಾಗಗಳು ಮತ್ತು ಸಮಿತಿಗಳಿಗೆ ಅನ್ವಯವಾಗುತ್ತವೆ. ಯಾವುದಾದರೊಂದು ಸಮಿತಿ ಅಥವಾ ಯಾವುದಾದರೊಂದು ವಿಭಾಗವು ಯಾವುದಾದರೂ ಹೆಚ್ಚುವರಿ ನಿಯಮಗಳನ್ನು ಬಯಸಿದರೆ ಈ ಸಮಿತಿಯು ಮಾಡಿದ ಸಾಮಾನ್ಯ ನಿಯಮಗಳಿಗೆ ಅಸಂಗತವಾಗದಂತೆ ಆ ನಿಯಮಗಳನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ನಿರ್ಣಯದ ಪ್ರಕರಣವು ಈಗಿರುವಂತೆಯೇ ಇರಬೇಕೆಂದು ನಾನು ಬಯಸುತ್ತೇನೆ.

**ಸರ್ದಾರ್ ಹರ್ನಾಮ್ ಸಿಂಗ್** (ಪಂಜಾಬ್–ಸಿಖ್ಖ್) ಮಾನ್ಯ ಅಧ್ಯಕ್ಷರೆ, ಆಚಾರ್ಯ ಕೃಪಲಾನಿ ಅವರು ಪ್ರಸ್ತಾವಿಸಿದ ನಿರ್ಣಯಕ್ಕೆ ಸಂಬಂಧಪಟ್ಟಂತೆ ನಾನು ಎರಡು ಅಂಶಗಳನ್ನು ಮುಂದಿಡಬಯಸುತ್ತೇನೆ. ಮೊದಲನೆಯದು ಈ ನಿರ್ಣಯದ ಕಂಡಿಕೆ ೧(ಎ)ಗೆ ಸಂಬಂಧಪಟ್ಟದ್ದು. ಡಾ. ಶ್ಯಾಮಪ್ರಸಾದ ಮುಖರ್ಜಿ ಅವರೊಡನೆ ನಾನು ಸಹಮತಿಸುತ್ತೇನೆ. ಅದೆಂದರೆ ಕಂಡಿಕೆ ೧(ಎ)ಯಲ್ಲಿ 'ಸಭೆಯ ವಿಧಾನಗಳ ನಿಯಮಗಳು' ಎಂಬ ಶಬ್ದಗಳ ಬದಲಾಗಿ 'ಸಭೆಯ, ಅದರ ವಿಭಾಗಗಳ ಮತ್ತು ಸಮಿತಿಗಳ ವಿಧಾನಗಳ ನಿಯಮಗಳು' ಎಂದು ಇರಬೇಕು. ಅದು ನನ್ನ ಮೊದಲನೆಯ ಪ್ರಸ್ತಾವ. ಕ್ಯಾಬಿನೆಟ್ ಮಿಷನ್ ತಮ್ಮ ಸ್ಪಷ್ಟೀಕರಣದಲ್ಲಿ ಯಾವಾಗಲೂ ವಿಭಾಗಗಳನ್ನು ಕುರಿತು ಹೇಳುವಾಗ ಸಂವಿಧಾನ ರಚನಾಸಭೆಯ ವಿಭಾಗಗಳು ಎಂದೇ ಉಲ್ಲೇಖಿಸುತ್ತಾರೆ. ಆದ್ದರಿಂದ ನನ್ನ ಪ್ರಸ್ತಾವ ಏನೆಂದರೆ ನಿಯಮದ ಕಂಡಿಕೆ ೧(ಎ) 'ಸಭೆಯ, ಅದರ ವಿಭಾಗಗಳ ಮತ್ತು ಸಮಿತಿಗಳ ನಿಯಮಗಳು' ಎಂದಿರಬೇಕು.

ಈಗ ಇಲ್ಲಿ ಇನ್ನೊಂದು ಸಂಗತಿಯಿದೆ. ಆಚಾರ್ಯ ಕೃಪಲಾನಿ ಅವರು ನಿರ್ಣಯವನ್ನು ಮಂಡಿಸುತ್ತಾ 'ವಿಭಾಗಗಳು ಮತ್ತು ಸಮಿತಿಗಳು' ಎಂಬ ಶಬ್ದಗಳು ಅನಾವಶ್ಯಕವಾದ್ದರಿಂದ ಅವುಗಳನ್ನು ತೆಗೆದುಹಾಕುವುದರ ಪರವಾಗಿ ತಾವಿರುವುದಾಗಿ ಹೇಳಿದ್ದಾರೆ. ಆದ್ದರಿಂದ ಪ್ರಸ್ತಾವಿತ ಸಭೆಯ ವಿಧಾನಗಳ ನಿಯಮಗಳಲ್ಲಿ ವಿಭಾಗಗಳು ಮತ್ತು ಸಮಿತಿಗಳ ನಿಯಮಗಳನ್ನು ಸೇರಿಸಲಾಗಿದೆ ಎಂದು ಅರ್ಥಮಾಡಿಕೊಳ್ಳಲಾಗಿದೆ. ಈ ಪೂರ್ವಭಾವಿ ಅಧಿವೇಶನದಲ್ಲಿ ನೀವು ರಚಿಸುತ್ತಿರುವ ಸಮಿತಿಗಳಲ್ಲಿ ಒಂದು ಎಂದರೆ ಕ್ಯಾಬಿನೆಟ್ ಮಿಷನ್ (ಸಂಪುಟ ನಿಯೋಗ) ಪ್ರಸ್ತಾವಗಳ ೨೦ನೆಯ ಕಂಡಿಕೆಯಲ್ಲಿ ಸ್ಥೂಲವಾಗಿ ವಿವರಿಸಲಾದ ಕೆಲವು ಉದ್ದೇಶಗಳಿಗಾಗಿ ಒಂದು ಸಲಹಾ ಸಮಿತಿ. ಈ ಸಲಹಾ ಸಮಿತಿಯಲ್ಲಿ ಅಲ್ಪಸಂಖ್ಯಾತರ ಸಂಪೂರ್ಣ ಪ್ರಾತಿನಿಧ್ಯವಿರಬೇಕೆಂದು ಕ್ಯಾಬಿನೆಟ್ ಮಿಷನ್ ಆಗಲೇ ಸ್ಪಷ್ಟವಾಗಿ ಹೇಳಿದೆ. ಪರಿಶಿಷ್ಟದ ಕಂಡಿಕೆ ೧ರ ಪ್ರಕಾರ, ಈಗ ಈ ಸಭೆಯು ಚುನಾಯಿಸಬೇಕಾದ ಒಂದು ಸಮಿತಿಯು ಆ ಸಮಿತಿಯ ವಿಧಾನಗಳ ನಿಯಮಗಳನ್ನು ರಚಿಸಬೇಕೆಂದರೆ ಸಲಹಾ ಸಮಿತಿಯ ವಿಧಾನಗಳನ್ನು ನಿಯಂತ್ರಿಸುವ ನಿಯಮಗಳಲ್ಲಿ ಅಲ್ಪಸಂಖ್ಯಾತರಿಗೆ ಧ್ವನಿಯೇ ಇಲ್ಲದಂತಾಗುತ್ತದೆ. ಆದ್ದರಿಂದ ನನ್ನ ಎರಡನೆಯ ಪ್ರಸ್ತಾವ ಏನೆಂದರೆ ಪರಿಶಿಷ್ಟದ ಒಂದನೆಯ ಕಂಡಿಕೆಯು ಹೀಗಿರಬೇಕು: "ಹತ್ತು ಜನ ಸಮಿತಿಯ ಸದಸ್ಯರನ್ನು ಏಕಮೇವ ವರ್ಗಾವಣೆ ಮಾಡಬಹುದಾದ ಮತದಿಂದ ಪ್ರಮಾಣಾನುಗುಣ ಸೂತ್ರದ ಪ್ರಕಾರ ಚುನಾಯಿಸಬೇಕು." ನಾನು ಇನ್ನೊಂದು ಕಂಡಿಕೆಯನ್ನು ಸೇರಿಸಲು ಬಯಸುತ್ತೇನೆ. ಆ ಎರಡನೆಯ ಕಂಡಿಕೆ ಹೀಗಿರುತ್ತದೆ: "ಉಳಿದ ಐವರನ್ನು ಪ್ರಮುಖ ಅಲ್ಪಸಂಖ್ಯಾತರಿಗೆ ಸೂಕ್ತವಾದ ಪ್ರಾತಿನಿಧ್ಯವನ್ನು ಕೊಡುವ ದೃಷ್ಟಿಯಿಂದ ಸಭೆಯ ಅಧ್ಯಕ್ಷರು ನಾಮನಿರ್ದೇಶನ ಮಾಡಬೇಕು." ಹಾಗಿಲ್ಲದೇ ಹೋದರೆ, ಈ ಸಭೆಯ ಕೆಲವು ಪ್ರಮುಖ ವಿಭಾಗಗಳಿಗೆ, ಅಂದರೆ, ಅಲ್ಪಸಂಖ್ಯಾತರಿಗೆ ಹಾನಿ ಮಾಡಬಹುದಾದ ರೀತಿಯಲ್ಲಿ ಸಲಹಾ ಸಮಿತಿಯ ಕಾರ್ಯಗಳನ್ನು ನಿಯಂತ್ರಿಸಬಹುದು ಎಂಬ ಭಯ ನನಗಿದೆ. ಇವು ಎರಡು ನನ್ನ ಪ್ರಸ್ತಾವಗಳು. ನಾನು ಕೋರುವುದೇನೆಂದರೆ, ಸೂಚಿಸಿದ ಪ್ರಕಾರ ಕಲಂ (೧) ಅನ್ನು ತಿದ್ದುಪಡಿ ಮಾಡಬಹುದು ಮತ್ತು ಪರಿಶಿಷ್ಟಕ್ಕೆ ಎರಡನೆಯ ಕಂಡಿಕೆಯಾಗಿ ಹೆಚ್ಚುವರಿ ಕಂಡಿಕೆಯೊಂದನ್ನು ಸೇರಿಸಬಹುದು. ಇದರಿಂದ ಪರಿಶಿಷ್ಟದಲ್ಲಿ ಏಳು ಕಂಡಿಕೆಗಳ ಬದಲು ಎಂಟು ಕಂಡಿಕೆಗಳು ಆಗುತ್ತವೆ.

**ಮಿ. ಕೆ.ಎಮ್. ಮುನ್ಷಿ** (ಬಾಂಬೆ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಶ್ರೀ ಸುರೇಶ್ಚಂದ್ರ ಬ್ಯಾನರ್ಜಿಯವರು

ಮಂಡಿಸಿದ ಮತ್ತು ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಬೆಂಬಲಿಸಿದ ತಿದ್ದುಪಡಿಯನ್ನು ಬೆಂಬಲಿಸಲು ನಾನು ಎದ್ದು ನಿಲ್ಲುತ್ತಿದ್ದೇನೆ. ಹೌಸ್ ಆಫ್ ಕಾಮನ್ಸ್ ಸಭೆಯ ಪದವಿನ್ಯಾಸವನ್ನು ಎರವಲು ಪಡೆಯಬಹುದಾದರೆ, ಈ ಸಭೆಯ ವ್ಯವಹಾರವು ಸಹಜವಾಗಿಯೇ ಅದರ ವಿಭಾಗಗಳು ಮತ್ತು ಸಮಿತಿಗಳ ವ್ಯವಹಾರವನ್ನೂ ಒಳಗೊಳ್ಳುತ್ತದೆ. ಆದ್ದರಿಂದ, 'ಸಭೆಯ ವಿಧಾನಗಳ ನಿಯಮಗಳು' ಎಂಬ ಶಬ್ದಗಳನ್ನು ಹಾಗೆಯೇ ಉಳಿಸಿಕೊಂಡರೆ, ವಿಭಾಗಗಳು ಮತ್ತು ಸಮಿತಿಗಳು ಎಂಬ ಶಬ್ದಗಳನ್ನು ನಮೂದಿಸಬೇಕಾದ ಕಟ್ಟುನಿಟ್ಟಾದ ಅಗತ್ಯವೇನೂ ಉಂಟಾಗುವುದಿಲ್ಲ. ಆ ವಿಷಯದಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ಅದೇ ಸಮಯದಲ್ಲಿ ಈ ವಿಚಾರವಾಗಿ ರಾಜ್ಯಪತ್ರದಿಂದ (ಸ್ಟೇಟ್ ಪೇಪರ್) ಇನ್ನೂ ಸ್ಪಷ್ಟೀಕರಣವನ್ನು ಪಡೆದಿಲ್ಲ. ಆದ್ದರಿಂದ ಮಾನ್ಯರೆ, ನಾನು ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುವುದೇನೆಂದರೆ 'ವಿಭಾಗಗಳು ಮತ್ತು ಸಮಿತಿಗಳು' ಎಂಬ ಶಬ್ದಗಳನ್ನು ತೆಗೆದುಹಾಕುವುದು ಅತ್ಯಂತ ಅವಿವೇಕವಾಗುತ್ತದೆ. ಏಕೆಂದರೆ ಈ ಸಂವಿಧಾನ ರಚನಾಮಂಡಲಿಯು ನಾವು ಒತ್ತಿ ಹೇಳುತ್ತಿರುವಂತೆ ಸ್ವಯಂ ನಿರ್ಣಯದ ಮತ್ತು ಸ್ವಯಮಾಡಳಿತದ ಸಂಸ್ಥೆಯಾಗಿಲ್ಲ ಎಂದು ಅದು ತೋರಿಸುತ್ತದೆ. ಅದರ ಯಾವುದೇ ಭಾಗ ಅಥವಾ ಯಾವುದೇ ಪ್ರಕರಣ ಅಥವಾ ಅದರ ಯಾವುದೇ ಸಮಿತಿಯು ಸ್ವತಂತ್ರವಾಗಿ ಕಾರ್ಯನಿರ್ವಹಿಸಬಹುದು ಅಥವಾ ತನ್ನದೇ ಆದ ನಿಯಮಗಳನ್ನು ರಚಿಸಿಕೊಳ್ಳಬಹುದು ಎಂಬ ವಾದಕ್ಕೆ ನಾವು ಪಕ್ಕಾಗಬಹುದು. ಸ್ವತಃ ಆಚಾರ್ಯ ಕೃಪಲಾನಿ ಅವರೇ ನಮೂದಿಸಿದ ಹಾಗೆ, ಅದನ್ನು ಈಗಿರುವಂತೆಯೇ ಬಿಟ್ಟರೆ, ನಿಯಮಗಳನ್ನು ಮಾಡಿಕೊಳ್ಳಬಹುದು. ಅಲ್ಲಿ ಈ ಸಮಿತಿಯು ಮಾಡಿದ ನಿಯಮಗಳಿಗೆ ವಿರುದ್ಧವಾದ ಅಥವಾ ಹೊಂದದ ನಿಯಮಗಳನ್ನು ಮಾಡಿಕೊಳ್ಳಲು ವಿಭಾಗಗಳು ಮತ್ತು ಸಮಿತಿಗಳಿಗೆ ಅಧಿಕಾರವಿರುವುದಿಲ್ಲ ಎಂದು ನಾವು ರೂಪಿಸಬಹುದು. ಸ್ವತಃ ಈ ವಾದವೇ ತೋರಿಸುವುದೇನೆಂದರೆ ವಿಭಾಗಗಳು ಮತ್ತು ಸಮಿತಿಗಳ ವಿಧಾನವನ್ನು ಕೆಲಮಟ್ಟಿಗೆ ನಿಯಂತ್ರಿಸಲು ಈ ವಿಧಾನ ಸಮಿತಿಯು ಸಮರ್ಥವಾಗಿದೆ. ಇಲ್ಲಿ ಈಗಾಗಲೇ ನಡೆದಿರುವ ಚರ್ಚೆಯ ದೃಷ್ಟಿಯಿಂದ 'ವಿಭಾಗಗಳು ಮತ್ತು ಸಮಿತಿಗಳು' ಎಂಬ ಶಬ್ದಗಳನ್ನು ಉಳಿಸಿಕೊಳ್ಳುವುದು ಬಹಳ ಉತ್ತಮ. ಒಂದು ಪಕ್ಷ ಅವುಗಳನ್ನು ತೆಗೆದರೆ ನಮ್ಮ ನಿರ್ಣಯದ ಬಗೆಗೆ ಮತ್ತಷ್ಟು ಚರ್ಚೆಗಳಿಗೆ ಕಾರಣವಾಗುತ್ತದೆ. ನಾನೊಂದು ಕ್ರಿಯಾಲೋಪವನ್ನು ನಿರೀಕ್ಷಿಸುತ್ತೇನೆ. ಒಂದು ಪಕ್ಷ ಈ ವಿಧಾನಗಳ ಸಮಿತಿಯು ವಿಭಾಗಗಳನ್ನು ಕುರಿತ ಪ್ರಶ್ನೆಗಳನ್ನು ಪರಿಗಣಿಸಲು ಪ್ರಾರಂಭಿಸಿದರೆ ಅಥವಾ ಆಚಾರ್ಯ ಕೃಪಲಾನಿ ಅವರು ಅಪೇಕ್ಷಿಸಿದಂತೆ, ಒಂದು ನಿಯಮವನ್ನು ಏಕೀಭವಿಸಿದರೆ, 'ಸಭೆ' ಎಂಬ ಶಬ್ದವು 'ವಿಭಾಗಗಳು ಮತ್ತು ಸಮಿತಿಗಳ'ನ್ನು ಒಳಗೊಳ್ಳುತ್ತದೆಯೇ ಎಂಬ ಕ್ರಿಯಾಲೋಪವನ್ನು ಖಂಡಿತವಾಗಿ ಎತ್ತಲಾಗುವುದು. ಆ ಸಮಯದಲ್ಲಿ ವಿಧಾನಗಳ ಸಮಿತಿಯ ಅಧ್ಯಕ್ಷರು ನಿರ್ಣಯವನ್ನು ಕೊಡಬೇಕಾಗುತ್ತದೆ. ಶಾಶ್ವತ ಅಧ್ಯಕ್ಷರಾಗಿರಬಹುದಾದ ವಿಧಾನಗಳ ಸಮಿತಿಯ ಅಧ್ಯಕ್ಷರ ನಿರ್ಧಾರಕ್ಕೆ ಸುಮ್ಮನೆ ಆ ಸಂಗತಿಯನ್ನು ಬಿಡುವುದು ಉತ್ತಮವಲ್ಲ. ಈ ಸಭೆಯು ಖಚಿತವಾಗಿ ರಚಿಸಬೇಕಾದದ್ದು ಏನೆಂದರೆ ಸಂವಿಧಾನ ರಚನಾಸಭೆಯು ಅಖಂಡ ಮತ್ತು ಅವಿಭಾಜ್ಯ, ಮತ್ತು ಪ್ರಕರಣಗಳು ಈಗಾಗಲೇ ಎತ್ತಿತೋರಿಸಿದಂತೆ ಸಭೆಯ ವಿಭಾಗಗಳು. ಅವು ಸ್ವತಂತ್ರ ಸಂಸ್ಥೆಗಳಾಗಿ ರೂಪುಗೊಳ್ಳಲು ಸಾಧ್ಯವಿಲ್ಲ. ಅವು ಸಂವಿಧಾನ ರಚನಾಸಭೆಯ ನಿಯಮಗಳಿಗೆ ಸರಿಹೊಂದದಂತಹ ವಿಧಾನಗಳನ್ನು ಒದಗಿಸಲಾರವು. ಆದ್ದರಿಂದ ನಾನು ಕೋರುವುದೇನೆಂದರೆ, ಈ ಸದನದ ಸಭಾಂಗಣದಲ್ಲಿ ಈ ಪ್ರಶ್ನೆಯನ್ನು ಎತ್ತಿರುವುದರಿಂದ 'ಸಭೆಯ, ಅದರ ವಿಭಾಗಗಳು ಮತ್ತು ಸಮಿತಿಗಳೂ ಸೇರಿದಂತೆ ವಿಧಾನಗಳ ನಿಯಮಗಳು' ಎಂಬ ಶಬ್ದಗಳನ್ನು ಸೇರಿಸುವ ಮೂಲಕ ಈ ನಿರ್ಣಯದ ವ್ಯಾಪ್ತಿ ಮತ್ತು ಗುರಿಯನ್ನು ಸ್ಪಷ್ಟಗೊಳಿಸಬೇಕು.

**ಗೌರವಾನ್ವಿತ ಶ್ರೀಯುತ ಬಸಂತಕುಮಾರ್ ದಾಸ್** (ಅಸ್ಸಾಂ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನಾನು ಹೇಳಬೇಕೆಂದಿದ್ದರಲ್ಲಿ ಬಹುಪಾಲನ್ನು ಶ್ರೀ ಮುನ್ಷಿ ಅವರು ಮುಂಗಂಡಿದ್ದಾರೆ. ಈ ಹಂತದಲ್ಲಿ ಒಂದು

ಮೂಲಭೂತ ಪ್ರಶ್ನೆಯ ಮೇಲೆ ಒಂದು ಕ್ರಿಯಾಲೋಪವನ್ನು ಎತ್ತಲು ನಾನು ಬಯಸಿದ್ದೇನೆ. ಅದೇಂದರೆ ಈ ಸಂವಿಧಾನ ರಚನಾಸಭೆಗೆ ವಿಭಾಗಗಳು ಮತ್ತು ಸಲಹಾ ಸಮಿತಿಗಳ ಕಾರ್ಯವನ್ನು ಪರಿಶೀಲಿಸುವ ಯಾವುದಾದರೂ ಹಕ್ಕು ಇದೆಯೇ? ಈ ನಿರ್ಣಯದ ವ್ಯಾಪ್ತಿಯೊಳಗೆ ವಿಭಾಗಗಳು ಮತ್ತು ಸಮಿತಿಗಳನ್ನು ಸೇರಿಸಬೇಕೆಂಬ ತಿದ್ದುಪಡಿಯನ್ನು ಮಂಡಿಸಲಾಗಿರುವುದರಿಂದ ಅದರ ಅಡಿಯಲ್ಲಿರುವ ತತ್ತ್ವದ ದೃಷ್ಟಿಯಿಂದ ಇದು ಅಗತ್ಯವಾಗಿದೆ ಸ್ವಾಮಿ. ವಿಭಾಗಗಳಿಗೆ ಮತ್ತು ಸಲಹಾ ಸಮಿತಿಗಳಿಗೆ ಬೇರೆ ಬೇರೆ ಕಾರ್ಯಭಾರಗಳನ್ನು ಹಂಚಲಾಗಿದೆ. ಒಂದು ವಿಭಾಗವು ಪ್ರಾಂತೀಯ ಸಂವಿಧಾನ ಮತ್ತು ಸಮೂಹ ಸಂವಿಧಾನವನ್ನು ಕೂಡ ರೂಪಿಸುತ್ತದೆ. ಸಲಹಾ ಸಮಿತಿಯು ನಾಗರಿಕರ ಮೂಲಭೂತ ಹಕ್ಕುಗಳನ್ನು ಕುರಿತು ಸಲಹೆಯನ್ನು ಕೊಡುತ್ತದೆ. ಈ ಹಾದಿಯಲ್ಲಿ ಅಲ್ಪಸಂಖ್ಯಾತರ ಹಿತಾಸಕ್ತಿಗಳನ್ನು ಸಂರಕ್ಷಿಸುವುದು ಹೇಗೆ ಮತ್ತು ಹೊರಚ್ಚಾಗಿರುವ ಪ್ರದೇಶಗಳ ಆಳ್ವಿಕೆಗೆ ಯೋಜನೆಯನ್ನು ರೂಪಿಸುವುದೂ ಸೇರುತ್ತದೆ. ವಿಭಾಗ ಮತ್ತು ಸಲಹಾ ಸಮಿತಿಗಳು ಏನೇ ಮಾಡಲಿ, ಈ ಸಂವಿಧಾನ ರಚನಾಸಭೆ, ಅದರ ಈ ಸರ್ವಸದಸ್ಯರ ಅಧಿವೇಶನವು ಅವರ ಕ್ರಿಯೆಗಳನ್ನು ಪರಿಶೀಲಿಸುವ ಯಾವ ಹಕ್ಕನ್ನೂ ಹೊಂದಿರುವುದಿಲ್ಲ. ಆದ್ದರಿಂದ, ಸ್ವಾಮಿ, ನಾನು ತಮ್ಮಲ್ಲಿ ಪ್ರಾರ್ಥಿಸುವುದೇನೆಂದರೆ ವಿಭಾಗಗಳು ಮತ್ತು ಸಲಹಾ ಸಮಿತಿಗಳಿಗೆ ನಿರ್ದೇಶನವನ್ನು ಕೊಡಲು ಅಥವಾ ಅವುಗಳ ಕೆಲಸವನ್ನು ಪರೀಕ್ಷಿಸಲು ಈ ಸಂವಿಧಾನ ರಚನಾಸಭೆಗೆ ಎಷ್ಟರ ಮಟ್ಟಿಗೆ ಅರ್ಹತೆಯಿದೆ ಎನ್ನುವುದನ್ನು ಕುರಿತು ಒಂದು ನಿರ್ಣಯವನ್ನು ನೀಡಬೇಕು. ಆದ್ದರಿಂದ ಮಾನ್ಯರೆ, ಈ ನಿರ್ಣಯವು ಅಂಗೀಕೃತವಾಗುವ ಮುನ್ನ ಮತ್ತು ನಿರ್ಣಯಕ್ಕೆ ಸಂಬಂಧಪಟ್ಟ ಎಲ್ಲ ಅಂಶಗಳನ್ನು ಚರ್ಚಿಸುವ ಮುನ್ನ ಮತ್ತು ಅದರ ಮೇಲೆ ಮಂಡಿಸಲಾಗುವ ತಿದ್ದುಪಡಿಗಳನ್ನು ಮತ್ತಷ್ಟು ಚರ್ಚಿಸುವ ಮುನ್ನ, ಈ ವಿಷಯವಾಗಿ ಒಂದು ನಿರ್ಣಯವನ್ನು ಕೊಡಬೇಕೆಂದು ತಮ್ಮನ್ನು ಕೇಳಲು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನನ್ನ ನಿರ್ಣಯವನ್ನು ಫೆಡರಲ್ (ಸಂಯುಕ್ತ) ನ್ಯಾಯಾಲಯಕ್ಕೆ ಎಳೆಯುವುದು ನನಗೆ ಇಷ್ಟವಿಲ್ಲ. ಆದ್ದರಿಂದ, ನಿರ್ಣಯವನ್ನು ಕೊಡುವುದು ನನಗೆ ಇಷ್ಟವಿಲ್ಲದಿರುವುದರಿಂದ ಅದರ ಬದಲಿಗೆ ಈ ವಿಚಾರವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಪಂಡಿತ್ ಜವಾಹರಲಾಲ್ ನೆಹರು ಅವರನ್ನು ನಾನು ಆಹ್ವಾನಿಸುತ್ತೇನೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಒಂದು ಔಪಚಾರಿಕ ನಿರ್ಣಯವೆಂದು ಪರಿಗಣಿಸಲಾಗಿತ್ತು. ಆದರೆ ಚರ್ಚೆಗಳು ನಡೆಯುತ್ತಿರುವ ರೀತಿಯನ್ನು ನೋಡಿದರೆ ಗೌರವಾನ್ವಿತ ಸದಸ್ಯರ ಮನದಲ್ಲಿ ಒಂದು ಬಗೆಯ ತಪ್ಪು ತಿಳುವಳಿಕೆ ಇದೆ ಎಂದು ತೋರುತ್ತದೆ. ಕೆಲವರು ಆ ವಿಚಾರವಾಗಿ ತೀವ್ರವಾದ ಅಭಿಪ್ರಾಯವನ್ನು ಹೊಂದಿದ್ದಾರೆ. ವಿಭಾಗಗಳಲ್ಲಿ ಏನನ್ನೇ ಮಾಡಲಿ ಅವುಗಳನ್ನು ಈ ಸಭೆಯಲ್ಲಿ ಪರಿಗಣಿಸಲೇಬೇಕು ಎನ್ನುವುದರಲ್ಲಿ ಅನುಮಾನವೇ ಇಲ್ಲ. ಮೂಲ ಕರಡುಪ್ರತಿ ಸರಿಯಾದ ಕರಡುಪ್ರತಿಯಾಗಿತ್ತು ಎಂದು ನಾನು ಭಾವಿಸುತ್ತೇನೆ. ಆದರೆ ಈ ವಿಷಯವನ್ನು ಒಂದು ತಿದ್ದುಪಡಿಯ ರೂಪದಲ್ಲಿ ಮಂಡಿಸಿದಾಗ ನಿಸ್ಸಂಶಯವಾಗಿ ಅದು ಸಂಪೂರ್ಣವಾಗಿ ಒಂದು ಬೇರೆಯ ವಿಷಯವೇ ಆಯಿತು. ಅದಕ್ಕೆ ವಿರೋಧ ಬಂತು ಮತ್ತು ಒಂದು ತಿದ್ದುಪಡಿಯನ್ನು ಮಾಡಬೇಕೆಂದು ಹೇಳಲಾಯಿತು. ನಿರ್ಣಯವನ್ನು ಮೂಲತಃ ಒಕ್ಕಣೆ ಮಾಡಿದ್ದಕ್ಕೆ ಆ ತಿದ್ದುಪಡಿಯು ಬಂದಿದೆ ಎನ್ನುವುದು ಈ ಸಭೆಯ ದೃಷ್ಟಿಕೋನದ ಅಭಿವ್ಯಕ್ತಿಯಾದರೆ, ಆ ಸಮಿತಿಗೆ ಈ ವಿಷಯವನ್ನು ಪರಿಗಣಿಸಲು ಪೂರ್ಣವಾದ ಅಧಿಕಾರವನ್ನು ನೀಡುತ್ತದೆಂದು ನಿರೀಕ್ಷಿಸಲಾಗಿತ್ತು. ಈಗ ಅಸ್ಸಾಮಿನಿಂದ ಒಬ್ಬರು ಗೌರವಾನ್ವಿತ ಸದಸ್ಯರು ಸಲಹಾ ಸಮಿತಿಯನ್ನು ಗಮನಕ್ಕೆ ತಂದಿದ್ದಾರೆ. ಸಲಹಾ ಸಮಿತಿಯು ನಿಸ್ಸಂಶಯವಾಗಿ ಮತ್ತು ಸುಸ್ಪಷ್ಟವಾಗಿ ಸಂವಿಧಾನ ರಚನಾಸಭೆಗೆ ಜವಾಬ್ದಾರವಾಗಬೇಕು. ಅದನ್ನು ಕುರಿತು ಯಾವುದೇ ಅನುಮಾನವಿಲ್ಲ. ಬೇರೆ ಯಾರಿಗೂ ಈ ವಿಚಾರವಾಗಿ ಯಾವುದೇ ಅನುಮಾನವಿದೆ ಎಂದು

ನಾನು ಭಾವಿಸುವುದಿಲ್ಲ. ಈ ಸದನದ ಎಲ್ಲ ಸಮಿತಿಗಳೂ ಈ ಸದನಕ್ಕೇ ಜವಾಬ್ದಾರವಾಗಿರಬೇಕು ಎಂದು ನಾನು ಭಾವಿಸುತ್ತೇನೆ. ಆದ್ದರಿಂದ ನಾನು ಈ ಗೌರವಾನ್ವಿತ ಸದನಕ್ಕೆ ಸಲಹೆ ಮಾಡುವುದಿಷ್ಟೇ : ಸದನವು ಮುಖ್ಯ ಸಂಗತಿಯನ್ನು ಒಪ್ಪಿಕೊಂಡಿರುವಾಗ ಈ ವಿಷಯದ ಸಮಗ್ರ ವ್ಯಾಪ್ತಿಯನ್ನು ಕುರಿತು ನಾವು ಪರಿಗಣಿಸಲು ಈ ಸಮಯವು ಅಷ್ಟೇನೂ ಸೂಕ್ತವಲ್ಲ. ಆದ್ದರಿಂದ ನಾನು ಸೂಚಿಸುವುದೇನೆಂದರೆ ಈ ನಿರ್ಣಯವನ್ನು ಮಂಡಿಸಿದ ಆಚಾರ್ಯ ಕೃಪಲಾನಿ ಅವರು, ಮುಂದಿಡಲಾದ ತಿದ್ದುಪಡಿಯನ್ನು ಸ್ವೀಕರಿಸಬೇಕು.

**ಆಚಾರ್ಯ ಜೆ.ಬಿ. ಕೃಪಲಾನಿ** : ತಿದ್ದುಪಡಿಯನ್ನು ನಾನು ಒಪ್ಪಿಕೊಂಡಿದ್ದೇನೆ.

**ಶ್ರೀ ಆರ್.ವಿ. ಧುಲೇಕರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಅಧ್ಯಕ್ಷರೆ, ನಾನು ತಿದ್ದುಪಡಿಯನ್ನು ಕುರಿತು ಮಾತನಾಡಲು ಬಯಸುತ್ತೇನೆ. ಉದ್ದೇಶಿತ ವಿಧಾನಗಳ ಸಮಿತಿಯು....]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : *[ಗೌರವಾನ್ವಿತ ಸದಸ್ಯರಿಗೆ ಇಂಗ್ಲಿಷ್ ಬರುವುದಿಲ್ಲವೆ ಎಂದು ನಾನು ಗೌರವದಿಂದ ಕೇಳಬಹುದೆ?]*

**ಶ್ರೀ ಆರ್.ವಿ. ಧುಲೇಕರ್** : *[ನನಗೆ ಇಂಗ್ಲಿಷ್ ಗೊತ್ತು, ಆದರೆ ನಾನು ಹಿಂದೂಸ್ತಾನಿಯಲ್ಲಿ ಮಾತನಾಡಲು ಬಯಸುತ್ತೇನೆ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : *[ಶ್ರೀ ರಾಜಗೋಪಾಲಾಚಾರಿ ಅವರಂತಹ ಅನೇಕ ಸದಸ್ಯರಿಗೆ ಹಿಂದೂಸ್ತಾನಿ ಗೊತ್ತಿಲ್ಲ.]*

**ಶ್ರೀ ಆರ್.ವಿ. ಧುಲೇಕರ್** : *[ಹಿಂದೂಸ್ತಾನಿ ಗೊತ್ತಿಲ್ಲದ ಜನರಿಗೆ ಭಾರತದಲ್ಲಿರಲು ಯಾವ ಹಕ್ಕೂ ಇಲ್ಲ. ಈ ಸಭೆಯಲ್ಲಿರುವ ಜನರು ಭಾರತದ ಸಂವಿಧಾನವನ್ನು ರೂಪಿಸುತ್ತಿದ್ದಾರೆ. ಹಿಂದೂಸ್ತಾನಿ ಗೊತ್ತಿಲ್ಲದವರು ಈ ಸಭೆಯಲ್ಲಿರಲು ಅರ್ಹರಲ್ಲ. ಅವರು ಹೊರಗೆ ಹೋಗುವುದೇ ವಾಸಿ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : *[ನೀವು ಏನು ಹೇಳಬೇಕು ಅಂತ ಬಯಸುತ್ತೀರೋ ಅದನ್ನು ದಯವಿಟ್ಟು ಹೇಳಿ.]*

**ಶ್ರೀ ಆರ್.ವಿ. ಧುಲೇಕರ್** : *[ವಿಧಾನಗಳ ಸಮಿತಿಯು ಎಲ್ಲ ನಿಯಮಗಳನ್ನೂ ಹಿಂದೂಸ್ತಾನಿಯಲ್ಲಿಯೇ ರಚಿಸಬೇಕು. ಅನಂತರ ಅದನ್ನು ಇಂಗ್ಲಿಷಿಗೆ ಅನುವಾದಿಸಬಹುದು ಎಂದು ಮಂಡಿಸಲು ನಾನು ಬಯಸುತ್ತೇನೆ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : *[ಶಿಸ್ತು, ಶಿಸ್ತು, ದ್ವಿಭಾಷಾಸೂತ್ರದ ಪ್ರಶ್ನೆಯನ್ನು ಕುರಿತು ಮತ್ತು ಪತ್ರಗಳನ್ನು ಎರಡು ಅಥವಾ ಹೆಚ್ಚಿನ ಭಾಷೆಗಳಲ್ಲಿ ಮುದ್ರಿಸುವುದನ್ನು ಕುರಿತು ಸಭೆಯನ್ನು ಉದ್ದೇಶಿಸಿ ಮಾತನಾಡಲು ನಾನು ನಿಮಗೆ ಅನುಮತಿ ಕೊಟ್ಟಿಲ್ಲ. ನೀವು ಸಂಪೂರ್ಣವಾಗಿ ಶಿಸ್ತನ್ನು ಮೀರಿದ್ದೀರಿ. ಆಚಾರ್ಯ ಕೃಪಲಾನಿ ಅವರ ನಿರ್ಣಯದ ಮೇಲಿನ ತಿದ್ದುಪಡಿಯನ್ನು ಕುರಿತು ಮಾತನಾಡಲು ನೀವು ಬಂದಿದ್ದೀರಿ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶಿಸ್ತು, ಶಿಸ್ತು!

**ಶ್ರೀ ಆರ್.ವಿ. ಧುಲೇಕರ್** : *[ನನ್ನ ತಿದ್ದುಪಡಿ ಏನೆಂದರೆ ವಿಧಾನಗಳ ಸಮಿತಿಯು ನಿಯಮಗಳನ್ನು ಹಿಂದೂಸ್ತಾನಿಯಲ್ಲಿ ರಚಿಸಬೇಕು. ಆಮೇಲೆ ಅವುಗಳನ್ನು ಇಂಗ್ಲಿಷಿಗೆ ಅನುವಾದಿಸಬಹುದು. ಒಬ್ಬ ಸದಸ್ಯರು ಒಂದು ನಿಯಮವನ್ನು ಕುರಿತು ಚರ್ಚಿಸುವಾಗ ಅದರ ಹಿಂದೂಸ್ತಾನಿ ಆವೃತ್ತಿಯನ್ನು ಓದಿಕೊಳ್ಳುತ್ತಾರೆ ಮತ್ತು ಆ ಆವೃತ್ತಿಯ ಆಧಾರದ ಮೇಲೆ ಒಂದು ತೀರ್ಮಾನಕ್ಕಾಗಿ ಒತ್ತಾಯ ಮಾಡುತ್ತಾರೆ, ಇಂಗ್ಲಿಷ್ ಆವೃತ್ತಿ ಅಲ್ಲ. ಕ್ಷಮಿಸಿ...]*

**ಶ್ರೀ ಆರ್.ವಿ. ಧುಲೇಕರ್** : *[ಆಚಾರ್ಯ ಕೃಪಲಾನಿ ಅವರ ನಿರ್ಣಯದ ಮೇಲೆ ನಾನು ಒಂದು ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಈ ಸಭೆಯ ಒಬ್ಬ ಸದಸ್ಯನಾಗಿ ಹಾಗೆ ಮಾಡಲು ನನಗೆ ಹಕ್ಕು ಇದೆ. ವಿಧಾನಗಳ ಸಮಿತಿಯು ತನ್ನ ನಿಯಮಗಳನ್ನು ಹಿಂದೂಸ್ತಾನಿಯಲ್ಲಿ ರಚಿಸಬೇಕೇ ವಿನಾ ಇಂಗ್ಲಿಷ್‌ನಲ್ಲಲ್ಲ.

ಒಬ್ಬ ಭಾರತೀಯನಾಗಿ ನಾನು ಮನವಿ ಮಾಡುವುದು ಏನೆಂದರೆ, ನಾವು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಗಳಿಸಲು ಹೊರಟಿದ್ದೇವೆ ಮತ್ತು ಅದಕ್ಕಾಗಿ ಹೋರಾಡುತ್ತಿದ್ದೇವೆ. ಅಂತಹ ನಾವು ನಮ್ಮದೇ ಅದ ಭಾಷೆಯಲ್ಲಿ ಯೋಚಿಸಬೇಕು ಮತ್ತು ಮಾತನಾಡಬೇಕು. ಇಲ್ಲಿಯವರೆಗೂ ನಾವು ಅಮೆರಿಕ, ಜಪಾನ್, ಜರ್ಮನಿ, ಸ್ವಿಟ್ಜರ್‌ಲೆಂಡ್ ಮತ್ತು ಹೌಸ್ ಆಫ್ ಕಾಮನ್ಸ್ ಕುರಿತು ಮಾತಾಡುತ್ತಿದ್ದೇವೆ. ಅದನ್ನು ಕೇಳಿ ಕೇಳಿ ನನಗೆ ತಲೆನೋವು. ಭಾರತೀಯರು ತಮ್ಮದೇ ಭಾಷೆಯಲ್ಲಿ ಯಾಕೆ ಮಾತಾಡುವುದಿಲ್ಲ ಎಂದು ನನಗೆ ಅಚ್ಚರಿಯಾಗುತ್ತದೆ. ಒಬ್ಬ ಭಾರತೀಯನಾಗಿ ಈ ಸಭೆಯ ನಡವಳಿಗಳನ್ನು ಹಿಂದೂಸ್ತಾನಿಯಲ್ಲಿಯೂ ನಡೆಸಬೇಕು ಎಂದು ನಾನು ಭಾವಿಸುತ್ತೇನೆ. ಜಗತ್ತಿನ ಇತಿಹಾಸದ ಬಗೆಗೆ ನಮಗೆ ಆಸಕ್ತಿಯಿಲ್ಲ. ನಮಗೆ ನಮ್ಮದೇ ದೇಶದ ಲಕ್ಷಾಂತರ ವರ್ಷಗಳಷ್ಟು ಹಳೆಯದಾದ ಇತಿಹಾಸವಿದೆ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶಿಸ್ತು, ಶಿಸ್ತು !

**ಶ್ರೀ ಆರ್.ವಿ. ದುಲೇಕರ್** : *[ನನ್ನ ತಿದ್ದುಪಡಿಯನ್ನು ಮಂಡಿಸಲು ನನಗೆ ಅವಕಾಶವನ್ನು ಕೊಡಬೇಕು ಎಂದು ನಿಮ್ಮಲ್ಲಿ ಪ್ರಾರ್ಥಿಸುತ್ತೇನೆ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶಿಸ್ತು, ಶಿಸ್ತು !

*[ನೀವು ಇನ್ನೂ ಮುಂದುವರಿಸುವುದಕ್ಕೆ ನಾನು ನಿಮಗೆ ಅನುಮತಿ ಕೊಡುವುದಿಲ್ಲ. ನೀವು ಶಿಸ್ತನ್ನು ಮೀರಿದ್ದೀರಿ ಎನ್ನುವುದಕ್ಕೆ ಈ ಸಭೆಯು ನನ್ನೊಡನೆ ಸಹಮತಿಸುತ್ತದೆ.]*

**ಆಚಾರ್ಯ ಜೆ.ಬಿ. ಕೃಪಲಾನಿ** : ಈ ಚರ್ಚೆಯನ್ನು ಮೊಟಕುಗೊಳಿಸುವಲ್ಲಿ ಈ ಸಭೆಗೆ ಸಹಾಯವಾಗುವುದಾದರೆ ಈಗ ಕೊಟ್ಟಿರುವ ಸಲಹೆಯನ್ನು ನಾನು ಒಪ್ಪಿಕೊಳ್ಳುತ್ತೇನೆ ಎಂದು ಅರಿಕೆ ಮಾಡಿಕೊಳ್ಳುತ್ತೇನೆ.

**ಗೌರವಾನ್ವಿತ ಡಾ. ಎಮ್.ಆರ್. ಜಯಕರ್** (ಬಾಂಬೆ : ಸಾಮಾನ್ಯ) : ಈ ನಿರ್ಣಯವನ್ನು ಕುರಿತು ನಾನು ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಈ ಸಭೆಯ ಮುಂದೆ ಈಗ ನಾನು ಮಂಡಿಸಲಿರುವ ಅಭಿಪ್ರಾಯಗಳು ತೀರ ಮುಂಜಾಗ್ರತೆಯಿಂದ ಕೂಡಿವೆಯೆಂದು ಪರಿಗಣಿತವಾಗುವುದಿಲ್ಲವೇನೋ ಎಂಬ ಬಗೆಗೆ ನನಗೆ ಖಾತ್ರಿ ಇಲ್ಲ. ಆದರೆ ಈ ಸಭೆಯು ಜಾಗರೂಕತೆಯಿಂದ ಗಮನಿಸಬೇಕೆಂದು ನಾನು ಬಯಸುವ ಕೆಲವು ಪರಿಗಣನೆಗಳನ್ನು ಸೂಚಿಸಲು ನಾನು ಬದ್ಧನಾಗಿದ್ದೇನೆ. ಈ ಪರಿಗಣನೆಗಳು 'ವಿಭಾಗಗಳು ಮತ್ತು ಸಮಿತಿಗಳು' ಎಂಬ ಶಬ್ದಗಳ ಕರಾರುವಾಕ್ಕಾದ ಪ್ರಸ್ತಾವಕ್ಕೆ ವಿರುದ್ಧವಾಗಿವೆ. ನನ್ನ ಅಭಿಪ್ರಾಯವು ಎಚ್ಚರಿಕೆಯ ಭಾವನೆಯಿಂದ ಪ್ರಚೋದಿತಗೊಂಡಿದೆ ಎನ್ನುವುದರಲ್ಲಿ ಅನುಮಾನವಿಲ್ಲ. ಪ್ರಸ್ತುತ ಹಂತದಲ್ಲಿ ಅದು ಅಪೇಕ್ಷಣೀಯ ಎಂದು ನಾನು ಭಾವಿಸುತ್ತೇನೆ. 'ವಿಭಾಗಗಳು' (ಸೆಕ್ಷನ್ಸ್) ಎಂಬ ಶಬ್ದವನ್ನು ನೆನಪಿನಲ್ಲಿ ಇಟ್ಟುಕೊಳ್ಳಿ. ಭವಿಷ್ಯದಲ್ಲಿ ಅವು ರಚನೆಯಾಗುವುದಕ್ಕೆ ಮುಂಚಿತವಾಗಿ ಅವುಗಳಿಗೆ ಶಾಸನವನ್ನು ರಚಿಸಲು ನಿಮ್ಮನ್ನು ಕರಾರುವಾಕ್ಕಾದ ಪರಿಭಾಷೆಯಲ್ಲಿ ಕೇಳಿಕೊಳ್ಳಲಾಗಿದೆ. ನೆನಪಿಡಿ, 'ವಿಭಾಗಗಳು' 'ಬಿ' ಮತ್ತು 'ಸಿ' ವಿಭಾಗಗಳನ್ನೂ ಒಳಗೊಂಡಿವೆ. ಮಿಗಿಲಾಗಿ ನೆನಪಿಡಬೇಕಾದ್ದೆಂದರೆ 'ಬಿ' ಮತ್ತು 'ಸಿ' ವಿಭಾಗಗಳಲ್ಲಿ ಇಂದು ಇಲ್ಲಿ ಹಾಜರಿಲ್ಲದ ಮತ್ತು ವಿಭಾಗಗಳು ಕೆಲಸ ಮಾಡಲು ಆರಂಭಿಸಿದಾಗ ಮುಂದೆ ಸೇರಿಕೊಳ್ಳಬಹುದಾದ ಕೆಲವು ಜನಗಳ ಗುಂಪು ಆಧಿಕ್ಯವನ್ನು ಪಡೆಯುವ ಸಾಧ್ಯತೆಯಿದೆ – ಬಹುತೇಕ ಅದು ಖಚಿತವಾಗಿಯೇ ಇದೆ. ಆ ಗುಂಪಿನ ಜನರು ದ್ವೇಷವಲ್ಲದಿದ್ದರೂ ಅನುಮಾನದ ಭಾವನೆಯಿಂದ ಇಂದು ಇಲ್ಲಿ ಹಾಜರಾಗಿಲ್ಲ. ಈ ಹಂತದಲ್ಲಿ ಅವರಿಗಾಗಿ ಮುಂಚಿತವಾಗಿ ಶಾಸನವನ್ನು ಮಾಡಲು ಬಯಸುತ್ತೀರಾ ಅಥವಾ ಈ ವಿಷಯವನ್ನು ಇರುವಂತೆಯೇ ಬಿಡುತ್ತೀರಾ? ಅಂದರೆ 'ಅಸೆಂಬ್ಲಿ' (ಸಭೆ) ಎಂಬ ಶಬ್ದವು ಮೊದಲ ನೋಟಕ್ಕೆ 'ವಿಭಾಗಗಳನ್ನು' (ಸೆಕ್ಷನ್ಸ್) ಒಳಗೊಳ್ಳುವುದರಿಂದ ಸಭೆಯ ನಿಯಮಗಳಿಗೆ ಸರಿಹೊಂದದಿರುವಂತಹ ನಿಯಮಗಳನ್ನು ವಿಭಾಗಗಳು 'ಎ', 'ಬಿ' ಮತ್ತು 'ಸಿ'ಗಳು ರೂಪಿಸಿಕೊಳ್ಳಬಲ್ಲವೆ? ಇದು ವಾಡಿಕೆಯ ಸಾಂವಿಧಾನಿಕ ನಿಯಮವಾಗಿರುತ್ತದೆ. ಈ ಹಂತದಲ್ಲಿ ಈ ವಿಷಯವನ್ನು ಇಲ್ಲಿಗೇ ಕೈಬಿಡಲಾಗದೇ, ಅಥವಾ ಈ ಸಭೆಯು ರಚಿಸಿದ ನಿಯಮಗಳನ್ನು

ಕರಾರುವಾಕ್ಕಾದ ಶಬ್ದಗಳಲ್ಲಿ ಕಟ್ಟುಬೀಳುವಂತೆ ಮಾಡುವ ಮೂಲಕ ಇಂದು ಇಲ್ಲಿ ಉಪಸ್ಥಿತರಿಲ್ಲದ ಆ ಗುಂಪಿನ ಮೇಲೆ ಹೇರಬೇಕೆಂದು ವಿಭಾಗಗಳನ್ನು ಕರಾರುವಾಕ್ಕಾದ ಶಬ್ದಗಳಲ್ಲಿ ಪ್ರಸ್ತಾವಿಸುವ ಮೂಲಕ ಮತ್ತಷ್ಟು ಮುಂದೆ ಹೋಗಿ ಈ ವಿಷಯವನ್ನು ಘರ್ಷಣೆಗೆ ಒಳಗು ಮಾಡುತ್ತೀರಾ? ಅಂತಹ ಘರ್ಷಣೆಯು ಸಂಪೂರ್ಣವಾಗಿ ಅನಾವಶ್ಯಕವಾದದ್ದು. ಏಕೆಂದರೆ ಸಭೆಯ ನಿಯಮಗಳು ಮೊದಲ ನೋಟಕ್ಕೆ ವಿಭಾಗಗಳ ನಿಯಮಗಳನ್ನೂ ಒಳಗೊಳ್ಳುತ್ತವೆ. ನೆನಪಿನಲ್ಲಿಡಿ ಈ ಗುಂಪಿನ ಜನರು ಇಂದು ಇಲ್ಲಿ ಉಪಸ್ಥಿತರಿಲ್ಲ. ಮಿಗಿಲಾಗಿ ಈ ನಡವಳಿಗಳನ್ನು ಅಸೂಯೆಯಿಂದ ಮತ್ತು ಅನುಮಾನದಿಂದ ಅವರು ಗಮನಿಸುತ್ತಿದ್ದಾರೆ. ಅವರ ಕೈಯಿಂದ ಏನನ್ನಾದರೂ ಕಿತ್ತುಕೊಳ್ಳುತ್ತಿದ್ದೀರಾ ಮತ್ತು ಅವರು ಆಗಮಿಸುವ ಮುಂಚೆಯೇ ಅದನ್ನು ಅಂತಿಮವಾಗಿ ನಿರ್ಧರಿಸಿಬಿಡುತ್ತೀರಾ ಎಂದು ಕಂಡುಹಿಡಿಯಲು ಗಮನಿಸುತ್ತಿದ್ದಾರೆ. ನೀವು ಹಾಗೆ ಮಾಡಿದರೆ ಭವಿಷ್ಯದಲ್ಲಿ ಅವರು ಇಲ್ಲಿಗೆ ಆಗಮಿಸಿದಾಗ ಸ್ನೇಹಪೂರ್ಣವಾದ ಮತ್ತು ವಿಶ್ವಾಸಾರ್ಹವಾದ ಪರಿಸರಕ್ಕೆ ಅಡಚಣೆಯನ್ನುಂಟುಮಾಡಿದಂತಾಗುವುದಿಲ್ಲವೇ? ಆದ್ದರಿಂದ ನಾನು ಸಲಹೆ ಮಾಡುವುದೇನೆಂದರೆ ಮುಂದುವರಿದು ವಿಭಾಗಗಳು ಮತ್ತು ಸಮಿತಿಗಳ ಕರಾರುವಾಕ್ಕಾದ ಪ್ರಸ್ತಾವವನ್ನು ಮಾಡುವ ಬದಲು, ಆಚಾರ್ಯ ಕೃಪಲಾನಿ ಅವರ ಮೂಲ ನಿರ್ಣಯದಲ್ಲಿರುವ ಶಬ್ದಗಳನ್ನು ಈಗಿರುವಂತೆಯೇ ಉಳಿಸಿಕೊಳ್ಳಬೇಕು.

**ಶ್ರೀ ದೇಬಿ ಪ್ರಸಾದ್ ಖೈತಾನ್** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಈ ನಿರ್ಣಯವನ್ನು ಕುರಿತು ಮಾತನಾಡುವ ಅಪೇಕ್ಷೆ ನನಗಿರಲಿಲ್ಲ. ಆದರೆ ತಿದ್ದುಪಡಿಯ ಸಂದರ್ಭದಲ್ಲಿ ಶ್ರೀ ಮುನ್ಷಿ ಅವರು ಬಳಸಿದ ಒಂದು ಶಬ್ದದ ದೃಷ್ಟಿಯಿಂದ, ಅದೆಂದರೆ 'ಅದರ' (ಇಟ್ಸ್) ಎಂಬ ಶಬ್ದವನ್ನು ಸೇರಿಸಬೇಕೆಂಬುದರಿಂದ ಮತ್ತು ನನ್ನ ಆದರಣೀಯ ಮಿತ್ರರಾದ ಡಾ. ಜಯಕರ್ ಅವರು ಅನಂತರ ಮಾಡಿದ ಭಾಷಣದಿಂದ ಕೆಲವು ಮಾತುಗಳನ್ನು ಆಡಬೇಕೆಂದು ಅನ್ನಿಸುತ್ತಿದೆ. ಮೊದಲು ನಾನು ಶ್ರೀ ಮುನ್ಷಿ ಅವರು ಮಾಡಿದ ಸಲಹೆಯನ್ನು ಕುರಿತು ಹೇಳುತ್ತೇನೆ. ಅದೆಂದರೆ 'ಅದರ' ಎಂಬ ಶಬ್ದವನ್ನು ಸೇರಿಸುವುದು. ತಿದ್ದುಪಡಿಯನ್ನು ಕುರಿತು ಮಂಡಿಸಿದ ಗೌರವಾನ್ವಿತ ಡಾ. ಶ್ಯಾಮಪ್ರಸಾದ ಮುಖರ್ಜಿ ಅವರು ಈ ಸಲಹೆಯನ್ನು ಒಪ್ಪಿಕೊಳ್ಳುವುದಿಲ್ಲ ಎಂದು ಭಾವಿಸುತ್ತೇನೆ. ಈ ನಿರ್ಣಯದ ಬಗೆಗೆ ಚರ್ಚೆಯು ನಡೆಯುತ್ತಿರುವಾಗ 'ಅದರ' ಎಂಬ ಶಬ್ದವನ್ನು ಉಪಯೋಗಿಸುವುದರಿಂದ ಡಾ. ಮುಖರ್ಜಿ ಅಥವಾ ಆಚಾರ್ಯ ಕೃಪಲಾನಿ ಅವರು ಉದ್ದೇಶಿಸಿಲ್ಲದ ಒಂದು ವ್ಯಾಖ್ಯಾನವನ್ನು ಅದರ ಮೇಲೆ ಹೇರಿದಂತಾಗಬಹುದು. 'ಅದರ' ಎಂಬ ಶಬ್ದದ ಬಳಕೆಯು ಸಭೆಯು ನೇಮಿಸಿದ ಸಮಿತಿಗಳ ವ್ಯಾಪ್ತಿಯನ್ನು ಪರಿಮಿತಗೊಳಿಸುತ್ತದೆ ಮತ್ತು ವಿಭಾಗಗಳು ನೇಮಕ ಮಾಡಿದವುಗಳಿಗಲ್ಲ ಎಂಬ ಅರ್ಥ ಕೊಡುವಂತೆ ಅದನ್ನು ವ್ಯಾಖ್ಯಾನ ಮಾಡಬಹುದು. ಆದ್ದರಿಂದ, ನಾನು ಸಲಹೆ ಮಾಡುವುದೇನೆಂದರೆ, ಮಾನ್ಯರೆ, ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಮಂಡಿಸಿದ ರೀತಿಯ ತಿದ್ದುಪಡಿಯನ್ನು, ಅಂದರೆ 'ವಿಭಾಗಗಳು ಮತ್ತು ಸಮಿತಿಗಳು ಸೇರಿದಂತೆ ಸಭೆ' ಎಂಬುದನ್ನು ಈ ಸದನವು ಅಂಗೀಕರಿಸಬೇಕು.

ಡಾ. ಜಯಕರ್ ಅವರು ಅಭಿವ್ಯಕ್ತಿಸಿದ ಭೀತಿಯ ಬಗೆಗೆ ಹೇಳುವುದಾದರೆ, ಪಂಡಿತ್ ಜವಾಹರಲಾಲ್ ನೆಹರು ಮತ್ತು ಆಚಾರ್ಯ ಕೃಪಲಾನಿ ಅವರು ವಿವರಿಸಿದಂತೆ, ಕೇಂದ್ರ ಸಂವಿಧಾನ ರಚನಾಸಭೆಯದ್ದಷ್ಟೇ ಅಲ್ಲದೆ, ಅದು ಕಾರ್ಯಾಚರಣೆಗೆ ತರಬಹುದಾದ ಎಲ್ಲ ವಿಭಾಗಗಳು ಮತ್ತು ಸಮಿತಿಗಳ ವಿಧಾನಗಳನ್ನು ಕೂಡ ಪಾಲಿಸಲು ಈ ಸಭೆಯು ನಿಯಮಗಳನ್ನು ಮಾಡಲು ಅರ್ಹವಾಗಿದೆ. ಈ ಸದನದಲ್ಲಿ ಸದಸ್ಯರ ಯಾವುದೇ ಗುಂಪು ಹಾಜರಿರಲಿ ಅಥವಾ ಇಲ್ಲದಿರಲಿ, ಈ ಸಭೆಯು ತನ್ನ ಕಾರ್ಯದಲ್ಲಿ ಸಮಗ್ರವಾಗಿ ಮುಂದುವರಿಯಬೇಕಾಗುತ್ತದೆ ಎನ್ನುವುದರ ಬಗೆಗೆ ನನಗೆ ಕಿಂಚಿತ್ತೂ ಅನುಮಾನವಿಲ್ಲ. ಆ ಗುಂಪು ಸೇರಬೇಕೆಂದು ತೀರ್ಮಾನಿಸುತ್ತದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೆ ಏನಾದರಾಗಿರಲಿ ನಾವು ನಮ್ಮ ಕೆಲಸವನ್ನು ಮುಂದುವರಿಸಲೇಬೇಕು. ಕಾಲಾನುಕ್ರಮದಲ್ಲಿ ಆ ಗುಂಪಿನ ಜನರು ಇದಕ್ಕೆ ಸೇರಿಕೊಳ್ಳುವ ಮೂಲಕ ಅಖಂಡ ದೇಶದ ಹಿತಾಸಕ್ತಿಗಳಿಗಾಗಿ ಸೇವೆ ಸಲ್ಲಿಸುವುದು ಯೋಗ್ಯ ಎಂದು ಕಂಡುಕೊಳ್ಳುತ್ತಾರೆ ಮತ್ತು ದೇಶದ

ಭವಿತವ್ಯವನ್ನು ಹೇಗೆ ರೂಪಿಸಬೇಕು ಎಂದು ನಮಗೆ ಸಲಹೆ ನೀಡುತ್ತಾರೆ. ಆದರೆ ನಾನು ಪುನರುಕ್ತಿ ಮಾಡುವುದೇನೆಂದರೆ, ಅವರು ಇಲ್ಲಿ ಇಲ್ಲದಿರುವವರೆಗೂ ನಾವು ನಮ್ಮ ಕೆಲಸವನ್ನು ಮುಂದುವರಿಸಿಕೊಂಡು ಹೋಗಬೇಕು. ಅದರಲ್ಲಿ ನಮ್ಮ ಹೃದಯವನ್ನು ತೊಡಗಿಸಿ ಸಮಗ್ರ ದೇಶದ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಆದ್ದರಿಂದ ಯಾವುದೇ ಭೀತಿಯನ್ನು ಪರಿಭಾವಿಸಬಾರದು ಅಥವಾ ಅಭಿವ್ಯಕ್ತಿಸಬಾರದು ಎಂದು ನಾನು ವಿಶ್ವಾಸವಿಡುತ್ತೇನೆ. ಈ ನಿರ್ಣಯದಲ್ಲಿ ಭವಿಷ್ಯದ ಗೋಜಲುಗಳನ್ನು ನಿವಾರಿಸಲು 'ವಿಭಾಗಗಳು ಮತ್ತು ಸಮಿತಿಗಳು' ಎಂಬ ಶಬ್ದಗಳನ್ನು ಸೇರಿಸೋಣ. ಸಮಗ್ರ ಸದನವು ಈ ತಿದ್ದುಪಡಿಯನ್ನು ಅಂಗೀಕರಿಸುತ್ತದೆ ಎಂದು ನಾನು ನಿರೀಕ್ಷಿಸುತ್ತೇನೆ.

**ಶ್ರೀ ಎಚ್.ಎಸ್. ಪ್ರೇಟರ್** (ಮದ್ರಾಸ್ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ಡಾ. ಎಮ್.ಆರ್. ಜಯಕರ್ ಅವರು ಏನನ್ನು ಹೇಳಿದ್ದಾರೋ ಅದಕ್ಕೆ ನನ್ನ ಸಂಪೂರ್ಣವಾದ ಬೆಂಬಲವನ್ನು ನೀಡಲು ಇಚ್ಛಿಸುತ್ತೇನೆ. ಈ ಸದನವು ಸಾಮಾನ್ಯ ವಿಧಾನಗಳ ನಿಯಮಗಳನ್ನು ರಚಿಸಬಹುದಾಗಿದ್ದರೂ, ಈ ಹಂತದಲ್ಲಿ ಅದು ವಿಭಾಗಗಳ ನಿಯಮಗಳನ್ನು ರಚಿಸಲು ತಲೆಹಾಕಬಾರದು ಅಥವಾ ರಚಿಸಬಾರದು ಎಂದು ನಾನು ಭಾವಿಸುತ್ತೇನೆ. ಡಾ. ಜಯಕರ್ ಅವರು ಅದರ ತೊಡಕುಗಳನ್ನು ಎತ್ತಿ ತೋರಿಸಿದ್ದಾರೆ. ಡಾ. ಜಯಕರ್ ಅವರು ಹೇಳಿದ್ದನ್ನು ಅನುಸರಿಸುವುದು ಉತ್ತಮ ರಾಜಕಾರಣವಾಗುತ್ತದೆ. ನಾವೆಲ್ಲರೂ ಈ ಕೆಲಸಗಳನ್ನು ಮಾಡಬೇಕೆಂದು ಇಷ್ಟ ಪಡುತ್ತೇವೆ. ಆದರೆ ಈ ಹಂತದಲ್ಲಲ್ಲ. ಅದಕ್ಕೂ ಒಂದು ಕಾಲವಿದೆ. ಆದ್ದರಿಂದ ನಾನು ಹೃತ್ಪೂರ್ವಕವಾಗಿ ಬೆಂಬಲಿಸುವುದೇನೆಂದರೆ ಆಚಾರ್ಯ ಕೃಪಲಾನಿಯವರು ಮೂಲತಃ ಮಂಡಿಸಿದ ನಿರ್ಣಯವು ಬದಲಾವಣೆಯಾಗದೆ ಹಾಗೇ ಉಳಿದುಕೊಳ್ಳಬೇಕು.

**ಶ್ರೀ ಶರತ್‌ಚಂದ್ರ ಬೋಸ್** (ಬಂಗಾಳ : ಸಾಮಾನ್ಯ) : ಮಾನ್ಯ ಅಧ್ಯಕ್ಷರೆ, ನನ್ನ ಮಿತ್ರರಾದ ಡಾ. ಸುರೇಶ್ಚಂದ್ರ ಬ್ಯಾನರ್ಜಿ ಅವರು ಸೂಚಿಸಿದ ಮತ್ತು ನನ್ನ ಮಿತ್ರರಾದ ಡಾ. ಶ್ಯಾಮಪ್ರಸಾದ ಮುಖರ್ಜಿ ಅವರು ಬೆಂಬಲಿಸಿದ ಆ ಸೂಚನೆಯ ಶಬ್ದಗಳನ್ನು ಈ ನಿರ್ಣಯದೊಳಗೆ ಸೇರಿಸಿದರೆ ಮತ್ತು ಈ ಸದನವು ಅಂಗೀಕರಿಸಿದರೆ ಸ್ಪಷ್ಟತೆಗೆ ಇನ್ನೂ ಅನುಕೂಲವಾಗುತ್ತದೆ ಎಂದು ನಾನು ಭಾವಿಸುತ್ತೇನೆ.

**ಒಬ್ಬ ಗೌರವಾನ್ವಿತ ಸದಸ್ಯರು** : ಆ ಶಬ್ದಗಳು 'ಅದರ ವಿಭಾಗಗಳು ಮತ್ತು ಸಮಿತಿಗಳು ಸೇರಿದಂತೆ'.

**ಇನ್ನೊಬ್ಬ ಗೌರವಾನ್ವಿತ ಸದಸ್ಯರು** : 'ಅದರ' ಎಂಬುದಲ್ಲ.

**ಶ್ರೀ ಶರತ್‌ಚಂದ್ರ ಬೋಸ್** : 'ಅದರ' ಎಂಬ ಶಬ್ದವು ಸ್ಥಿತಿಯನ್ನು ಸುಧಾರಿಸುವುದಿಲ್ಲ ಮತ್ತು ಈ ನಿರ್ಣಯಕ್ಕೆ 'ವಿಭಾಗಗಳು ಮತ್ತು ಸಮಿತಿಗಳು ಸೇರಿದಂತೆ' ಎಂಬ ಶಬ್ದಗಳನ್ನು ಸೇರಿಸಿದರೆ ನಾನು ಪೂರ ಸಂತೃಪ್ತನಾಗುತ್ತೇನೆ. ಆಚಾರ್ಯ ಕೃಪಲಾನಿ ಅವರು ತಮ್ಮ ನಿರ್ಣಯವನ್ನು ಮಂಡಿಸುತ್ತಾ ಹೇಳಿದ್ದೇನೆಂದರೆ ಸಭೆಯ ವಿಧಾನಗಳ ನಿಯಮಗಳು ವಿಭಾಗಗಳು ಮತ್ತು ಸಮಿತಿಗಳನ್ನು ಪಾಲಿಸಬೇಕು ಎನ್ನುವುದು ತಮ್ಮ ಅಭಿಪ್ರಾಯವಾಗಿತ್ತು. ಆದರೆ ಸದನದ ವಿವಿಧ ಪಾರ್ಶ್ವಗಳಿಂದ ಅದನ್ನು ಮಾಡಬೇಕೆ ಅಥವಾ ಮಾಡಬಾರದೆ ಎಂಬ ಪ್ರಶ್ನೆಗಳು ಎದ್ದಿರುವುದರಿಂದ, ಈ ಶಬ್ದಗಳನ್ನು ಸೇರಿಸುವುದನ್ನು ಒಪ್ಪಿಕೊಳ್ಳುವುದರಿಂದ ಮುಂದಿನ ಎಲ್ಲ ವಿವಾದಗಳನ್ನೂ ಇತ್ಯರ್ಥಗೊಳಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಈ ಸಂಬಂಧವಾಗಿ ಡಾ. ಜಯಕರ್ ಹೇಳಿದ್ದನ್ನು ಉಲ್ಲೇಖಿಸಲು ಬಯಸುತ್ತೇನೆ. ಪ್ರಮುಖ ಸಭೆಯನ್ನಷ್ಟೇ ಅಲ್ಲದೆ ಅದರ ವಿಭಾಗಗಳು ಮತ್ತು ಸಮಿತಿಗಳನ್ನೂ ಪಾಲಿಸುವಂತಹ ವಿಧಾನಗಳ ನಿಯಮಗಳನ್ನು ಈ ಸಭೆಯು ರಚಿಸಿದರೆ ಭವಿಷ್ಯದಲ್ಲಿ ಅದು ಯಾವುದೇ ಸಂಘರ್ಷವನ್ನು ಉಂಟುಮಾಡಲಾರದು ಎಂದು ನಾನು ಭಾವಿಸುತ್ತೇನೆ. ಅದರ ಬದಲು, ಅದು ಅನೇಕ ಸಂಘರ್ಷಗಳನ್ನು ಮುಂಚಿತವಾಗಿಯೇ ಪರಿಹರಿಸುತ್ತದೆ ಎಂದು ನಾನು ಭಾವಿಸುತ್ತೇನೆ. ಇದಕ್ಕಿಂತ ಹೆಚ್ಚಿನದನ್ನು ನಾನು ಹೇಳಲು ಅಪೇಕ್ಷಿಸುವುದಿಲ್ಲ. ಪ್ರಮುಖ ಸಭೆ ಮತ್ತು ವಿಭಾಗಗಳ ನಡುವೆ ಏನಾದರೂ ಸಂಘರ್ಷ ಉದ್ಭವಿಸಬಹುದೆಂದು ನಾವು ಯೋಚಿಸುತ್ತಿದ್ದರೆ 'ವಿಭಾಗಗಳು ಮತ್ತು ಸಮಿತಿಗಳು

ಸೇರಿದಂತೆ' ಎಂಬ ಶಬ್ದಗಳನ್ನು ಸೇರಿಸುವ ಮೂಲಕ ಇಲ್ಲೇ ಈಗಲೇ ಆ ಸಂಘರ್ಷವನ್ನು ಪರಿಹರಿಸುವುದು ಉತ್ತಮ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಇದನ್ನು ನಾವು ಸಾಕಷ್ಟು ದೀರ್ಘಕಾಲ ಚರ್ಚಿಸಿದ್ದೇವೆ ಎಂದು ಭಾವಿಸುತ್ತೇನೆ.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್** (ಬಾಂಬೆ : ಸಾಮಾನ್ಯ) : ನನ್ನದೊಂದು ಸಲಹೆ ಇದೆ...

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಗೌರವಾನ್ವಿತ ಸದಸ್ಯರ ಸಲಹೆಯ ಜೊತೆಯಲ್ಲಿ ದೀರ್ಘವಾದ ಭಾಷಣ ಇರುವುದಿಲ್ಲ ಎಂದು ನಿರೀಕ್ಷಿಸುತ್ತೇನೆ.

**ಗೌರವಾನ್ವಿತ ಶ್ರೀ ಬಿ.ಜಿ. ಖೇರ್** : ಭಾಷಣವನ್ನು ಮಾಡಬೇಕೆಂಬ ತೀವ್ರವಾದ ತವಕವೇನು ನನಗಿಲ್ಲ. ಈ ಸಭೆಯು ಅದರ ವಿಭಾಗಗಳು ಮತ್ತು ಅದರ ವಿಧಾನಗಳಿಗೆ ಸಂಬಂಧಿಸಿದಂತೆ ಪರಮೋಚ್ಚವಾದದ್ದು ಎಂಬ ಅನುಮಾನವನ್ನು ಈ ಸಭೆಯ ಮನಸ್ಸಿನಲ್ಲಾಗಲಿ ಅಥವಾ ಹೊರಗಿನ ಜಗತ್ತಿಗಾಗಲಿ ನಾವು ಬಿಡಬಾರದು. ಚರ್ಚೆಯ ಅನಂತರ ಮತ್ತು ವಿವಿಧ ಭಯಗಳನ್ನು ಈಗ ಅಭಿವ್ಯಕ್ತಿಸಿದ ಅನಂತರ 'ವಿಭಾಗಗಳು' ಮತ್ತು 'ಸಮಿತಿಗಳು' ಎಂಬ ಶಬ್ದಗಳನ್ನು ಅಂಗೀಕರಿಸಲು ನಿರಾಕರಿಸುವುದು ಅವಿವೇಕದ ನಡೆಯಾಗುತ್ತದೆ ಎಂದು ನಾನು ಭಾವಿಸುತ್ತೇನೆ. ವಿಭಾಗಗಳು ಒಳಗೆ ಬರುತ್ತವೆಯೇ ಅಥವಾ ವಿಭಾಗಗಳು ಕುಳಿತುಕೊಳ್ಳುತ್ತವೆಯೇ ಎಂಬ ವಿಚಾರದಲ್ಲಿ ಇಂದು ನಾವು ಏನೇನೂ ಖಚಿತವಾಗಿಲ್ಲ. ಇದರಿಂದ ಹೊರಬರುವ ಒಂದು ಉತ್ತಮ ಮಾರ್ಗವೆಂದರೆ 'ಸಮಿತಿಗೆ ಸೇರಿಸಿಕೊಳ್ಳುವ ಅಧಿಕಾರದೊಡನೆ' (ವಿತ್ ಪವರ್ ಟು ಕೋಆಪ್ಟ್) ಎಂಬ ಶಬ್ದಗಳನ್ನು ಸೇರಿಸುವುದು. ಇದರಿಂದಾಗಿ ಇತರ ಜನರು ಬಂದಾಗ, ಈ ನಿಯಮಗಳು ಅನ್ವಯವಾಗದಿದ್ದರೆ ಅಥವಾ ಈ ನಿಯಮಗಳನ್ನು ತಿದ್ದುಪಡಿ ಮಾಡಬೇಕಾದ ಅಗತ್ಯ ಕಂಡುಬಂದರೆ ಅಥವಾ ಯಾವುದೇ ಸಲಹೆಗಳನ್ನು ಮಾಡಿದರೆ, ಆಗ ಅವುಗಳನ್ನು ತಿದ್ದುಪಡಿ ಮಾಡುವುದು ಸಾಧ್ಯವಾಗುತ್ತದೆ. ಆದ್ದರಿಂದ, ನಾನು ಸೂಚಿಸುವುದೇನೆಂದರೆ ಈಗ ನಾವು ನೇಮಿಸುವ ಸಮಿತಿಗೆ, 'ಸಮಿತಿಗೆ ಸೇರಿಸಿಕೊಳ್ಳುವ ಅಧಿಕಾರವನ್ನು' ಕೊಡುವುದು ಅತ್ಯುತ್ತಮ ಎನ್ನಿಸುತ್ತದೆ. ಇದರಿಂದಾಗಿ ಅವರಿಗೆ ಕಾಲ ಕಾಲಕ್ಕೆ ತಿದ್ದುಪಡಿಗಳನ್ನು ಮತ್ತು ಬದಲಾವಣೆಗಳನ್ನು ಸೂಚಿಸಲು ಸಾಧ್ಯವಾಗುತ್ತದೆ. ಅವುಗಳನ್ನು ಅನಂತರ ಈ ಸದನವು ದೃಢೀಕರಿಸಬಹುದು, ಅನುಮೋದಿಸಬಹುದು ಅಥವಾ ತಿರಸ್ಕರಿಸಬಹುದು. ಆದ್ದರಿಂದ ಪ್ರಸ್ತುತ ನಾವು ಡಾ. ಶ್ಯಾಮಪ್ರಸಾದ ಮುಖರ್ಜಿ ಅವರ ತಿದ್ದುಪಡಿಯನ್ನು ಮತ್ತಷ್ಟು ಸೇರ್ಪಡೆಯೊಡನೆ – 'ಸಮಿತಿಗೆ ಸೇರಿಸಿಕೊಳ್ಳುವ ಅಧಿಕಾರದೊಡನೆ' – ಅಂಗೀಕರಿಸಬೇಕು ಎಂದು ನಾನು ಭಾವಿಸುತ್ತೇನೆ. ಅದನ್ನು ಮಾಡಿದರೆ, ಸನ್ನಿವೇಶದ ಅಗತ್ಯಗಳನ್ನು ಇನ್ನೂ ಚೆನ್ನಾಗಿ ಈಡೇರಿಸಬಹುದು ಎಂದು ನಾನು ಭಾವಿಸುತ್ತೇನೆ.

**ಶ್ರೀ ಜಯರಾಮ್‌ದಾಸ್ ದೌಲತ್‌ರಾಮ್** (ಸಿಂಧ್ : ಸಾಮಾನ್ಯ) : ಚರ್ಚೆಯ ಈ ಕೊನೆಯ ಹಂತದಲ್ಲಿ ನಾನು ಸದನದ ಹೆಚ್ಚು ಸಮಯವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ. ನಾನು ಏನು ಹೇಳಬೇಕಾಗಿದೆಯೋ ಅದನ್ನು ಬಹಳ ಸಂಕ್ಷಿಪ್ತವಾಗಿ ಹೇಳಿಬಿಡುತ್ತೇನೆ. ಈ ಸಂವಿಧಾನ ರಚನಾಸಭೆಯು ಸರ್ವೋಚ್ಚ ಸಂಸ್ಥೆ ಎಂಬ ನಿಲುವನ್ನು ಪ್ರತಿಯೊಬ್ಬರೂ ತೆಗೆದುಕೊಳ್ಳಬೇಕು ಎಂದು ನಾನು ಭಾವಿಸುತ್ತೇನೆ. ತನ್ನ ವಿಭಾಗಗಳು ಮತ್ತು ಸಮಿತಿಗಳಿಗೆ ನಿಯಮಗಳನ್ನು ರಚಿಸುವ ಹಕ್ಕು ಅದಕ್ಕಿರಬೇಕು. ಸುಮ್ಮನೆ 'ಸಭೆ' (ಅಸೆಂಬ್ಲಿ) ಎಂಬ ಶಬ್ದವನ್ನಿಟ್ಟುಕೊಂಡು ಅನಂತರ ಅದು ವಿಭಾಗಗಳು ಮತ್ತು ಸಮಿತಿಗಳನ್ನೂ ಒಳಗೊಳ್ಳುತ್ತದೆ ಎನ್ನುವುದು ನಮ್ಮ ಉದ್ದೇಶವಾಗಿತ್ತು ಎಂದು ವ್ಯಾಖ್ಯಾನಿಸುವುದು ವಿವೇಕ ಎಂದು ನನಗನ್ನಿಸುವುದಿಲ್ಲ. ನಾವು ಪ್ರತಿಯೊಂದನ್ನೂ ಸಾಧ್ಯವಾದಷ್ಟೂ ಪಾರದರ್ಶಕವನ್ನಾಗಿ ಮಾಡಬೇಕು. ಅದೇ ಸಮಯದಲ್ಲಿ ಇಂದು ಗೈರುಹಾಜರಾಗಿರುವ ಮತ್ತು ಮುಂದಿನ ಹಂತದಲ್ಲಿ ನಮ್ಮನ್ನು ಸೇರಲಿರುವ ಮಿತ್ರರ ಸಾಧ್ಯತೆಯ ಬಗೆಗೂ ವ್ಯವಹರಿಸಬೇಕು. ಆ ಬೆಳವಣಿಗೆಯು ಸಂಭವಿಸಿದರೆ ನಾವು ಅದಕ್ಕಾಗಿ ಅವಕಾಶ ಒದಗಿಸಬಹುದು. ಆದ್ದರಿಂದ

ನಾನು ನನ್ನ ಮಿತ್ರರಾದ ಶ್ರೀ ಖೇರ್ ಅವರ ಮಾತನ್ನು ಬೆಂಬಲಿಸುತ್ತೇನೆ. ಅದೇ ಸಮಯದಲ್ಲಿ 'ಸೇರಿದಂತೆ' (ಇನ್‌ಕ್ಲೂಡಿಂಗ್) ಎಂಬ ಶಬ್ದವು ನನ್ನ ಅಭಿಪ್ರಾಯದಲ್ಲಿ ಅನುಚಿತ. ಮೂಲರೂಪವನ್ನು ಉಳಿಸಿಕೊಂಡರೆ, 'ಸೇರಿದಂತೆ' ಎಂಬ ಶಬ್ದವು ಒಡ್ಡಿದ ಅಲ್ಪ ಘರ್ಷಣೆಯನ್ನೂ ತೆಗೆದುಹಾಕಬಹುದು. ಮತ್ತೆ, ಎಲ್ಲ ನಿಯಮಗಳನ್ನೂ ನಾವು ಒಂದೇ ಸಲಕ್ಕೆ ರಚಿಸಬೇಕಾಗಿಲ್ಲ. ವಿಭಾಗಗಳಿಗೆ ಸಂಬಂಧಿಸಿದಂತೆ ನಿಯಮಗಳನ್ನು ಅನಂತರ ರಚಿಸಬೇಕಾಗಬಹುದು. ಅಥವಾ ಏನಾದರೂ ಬದಲಾವಣೆಗಳು ಇಲ್ಲವೇ ತಿದ್ದುಪಡಿಗಳು ಅಗತ್ಯ ಎನ್ನಿಸಿದರೆ ವಿಧಾನಗಳ ಸಮಿತಿಯು ಅದನ್ನು ಮಾಡುತ್ತದೆ ಮತ್ತು ಅದಕ್ಕೆ ಹೆಚ್ಚುವರಿ ಸದಸ್ಯರನ್ನು ಸೇರಿಸಿಕೊಳ್ಳುವ ಅಧಿಕಾರ ಇದ್ದರೆ ಎಲ್ಲ ತೊಂದರೆಗಳು ಮತ್ತು ಸಂಭವನೀಯ ಬೆಳವಣಿಗೆಗಳನ್ನು ಇತ್ಯರ್ಥಗೊಳಿಸಿದಂತಾಗುತ್ತದೆ ಎಂಬ ತಿಳುವಳಿಕೆಯನ್ನಿಟ್ಟುಕೊಂಡು ನಾವು ನಿಯಮಗಳನ್ನು ರಚಿಸಬಹುದು.

**ಆಚಾರ್ಯ ಜೆ.ಬಿ. ಕೃಪಲಾನಿ** : ಈ ಸಮಿತಿಯ ಕಾರ್ಯದ ವ್ಯಾಪ್ತಿಯ ಬಗೆಗೆ ಮತ್ತು ಈ ಸಮಿತಿಯು ಅಸ್ತಿತ್ವದಲ್ಲಿರುವ ಕಾಲದ ಬಗೆಗೆ ಕೂಡ ಕೆಲವು ತಪ್ಪು ತಿಳುವಳಿಕೆಗಳು ಇದ್ದಂತೆ ತೋರುತ್ತದೆ. ಈ ನಿರ್ಣಯವನ್ನು ನಿಮ್ಮ ಮುಂದೆ ಮಂಡಿಸುವಾಗ ನಾನು ಸೂಚಿಸಿದಂತೆ, ಮಾಡಿಕೊಳ್ಳಬೇಕಾದ ನಿಯಮಗಳು ಇಲ್ಲಿ ಮತ್ತು ಈಗ ನಡೆಸಬೇಕಾದ ವ್ಯವಹಾರಕ್ಕಾಗಿ ಮಾತ್ರ. ನಮಗೆ ಶುದ್ಧಾಂಗವಾಗಿ ಯಾವ ನಿಯಮಗಳೂ ಇಲ್ಲ. ನಾವು ಖಾಲಿ ಹಲಗೆಯ ಮೇಲೆ ಬರೆಯುತ್ತಿದ್ದೇವೆ. ನಾನು ಮತ್ತೂ ಹೇಳಿದ್ದೇನೆಂದರೆ ಈ ನಿಯಮಗಳು ಹೆಚ್ಚು ಕಡಿಮೆ ಎಲ್ಲ ಸಭೆಗಳ ನಡವಳಿಗಳಿಗೂ ಮಾರ್ಗದರ್ಶಿಯಾಗಿ ಒದಗಿಬರುತ್ತವೆ ಮತ್ತು ಇವು ಸಾಮಾನ್ಯ ಸ್ವರೂಪದ್ದಾಗಿರುತ್ತವೆ. ಸಮಿತಿಗಳು ತಮ್ಮಷ್ಟಕ್ಕೆ ಮತ್ತು ವಿಭಾಗಗಳು ಇನ್ನೂ ಹೆಚ್ಚಿನ ನಿಯಮಗಳನ್ನು ರಚಿಸಿಕೊಳ್ಳಬೇಕಾಗುತ್ತದೆ ಎಂಬ ವಿಚಾರದಲ್ಲಿ ನನ್ನ ಮನಸ್ಸಿನಲ್ಲಿ ಯಾವ ಅನುಮಾನವೂ ಇಲ್ಲ. ಅವುಗಳನ್ನು ಉಪನಿಯಮಗಳು ಎಂದು ಕರೆಯಬಹುದು ಅಥವಾ ಬೇರೆ ಯಾವುದಾದರೂ ಹೆಸರಿನಿಂದ ಕರೆಯಬಹುದು. ಈ ಸಮಿತಿಯು ಆಮೂಲಾಗ್ರವಾದ ನಿಯಮಗಳನ್ನು ರಚಿಸುವುದಿಲ್ಲ. ಸಮಿತಿಗೆ ಸೇರಿಸಿಕೊಳ್ಳುವ ಪ್ರಶ್ನೆಗೆ ಸಂಬಂಧಿಸಿದಂತೆ ಹೇಳುವುದಾದರೆ, ಅದು ಈ ಹಂತದಲ್ಲಿ ಉದ್ಭವಿಸಬೇಕಾಗಿಲ್ಲ. ಈ ಸಮಿತಿಯು ಶಾಶ್ವತವಾಗಿಯೂ ಇರುವುದಿಲ್ಲ. ಇಂದು ಗೈರುಹಾಜರಾಗಿರುವ ಸದನದ ಒಂದು ಭಾಗವು ಒಳಗೆ ಬರಲು ತೀರ್ಮಾನಿಸಿದರೆ, ಆಗ ಇಲ್ಲಿ ರಚಿಸಲಾಗಿರುವ ನಿಯಮಗಳ ಬಗೆಗೆ ಅವರಿಗೆ ಏನಾದರೂ ಆಕ್ಷೇಪವಿದ್ದರೆ, ಅವುಗಳನ್ನು ಪರಿಷ್ಕರಿಸುವಂತೆ ಈ ಸದನವು ಸದಾ ಆದೇಶ ನೀಡಬಲ್ಲದು. ಆದ್ದರಿಂದ ಸಮಿತಿಗೆ ಸೇರಿಸಿಕೊಳ್ಳುವ ಈ ಪ್ರಶ್ನೆ ಕೂಡ ಉದ್ಭವಿಸುವುದಿಲ್ಲ. ಏಕಮೇವ ವರ್ಗಾಯಿಸಬಹುದಾದ ಮತದ ವಿಧಾನದಲ್ಲಿ ರಚಿಸಲಾಗಿರುವ ಒಂದು ಸಮಿತಿಯನ್ನು ನೇಮಿಸಿ ಅದಕ್ಕೆ ಸಮಿತಿಯಲ್ಲಿ ಸೇರಿಸಿಕೊಳ್ಳುವ ಅಧಿಕಾರವನ್ನು ಕೊಡುವುದು ಒಂದು ಕೆಟ್ಟ ವಿಧಾನ ಎಂದು ನಾನು ಭಾವಿಸುತ್ತೇನೆ. ಮಾನ್ಯರೆ, ಹತ್ತು ಜನರನ್ನು ವರ್ಗಾಯಿಸಬಹುದಾದ ಏಕಮೇವ ಮತದಲ್ಲಿ ಆಯ್ಕೆ ಮಾಡಬೇಕು ಮತ್ತು ಐದು ಜನರನ್ನು ಅಲ್ಪಸಂಖ್ಯಾತರಿಂದ ಸಮಿತಿಗೆ ಸೇರಿಸಿಕೊಳ್ಳಬೇಕು ಎಂಬ ತಿದ್ದುಪಡಿಯನ್ನು ನೀವು ಅಂಗೀಕರಿಸಿದ್ದೀರೋ ಇಲ್ಲವೋ ನನಗೆ ತಿಳಿಯದು. ಈ ಸಮಿತಿಯ ಸದಸ್ಯರನ್ನು ಏಕಮೇವ ವರ್ಗಾಯಿಸಬಹುದಾದ ಮತದ ವಿಧಾನದಲ್ಲಿ ಆಯ್ಕೆ ಮಾಡಬೇಕು ಎಂಬ ಮುನ್ನೇರ್ಪಾಡನ್ನು ಈಗಾಗಲೇ ಮಾಡಿದ್ದೇವೆ. ಅದು ಎಲ್ಲ ಅಲ್ಪಸಂಖ್ಯಾತರನ್ನೂ ಒಳತರುತ್ತದೆ. ಹತ್ತು ಜನರ ಒಂದು ಮಂಡಲಿಯು ಅಲ್ಪಸಂಖ್ಯಾತರನ್ನು ನೇಮಕ ಮಾಡುವುದು ಒಳ್ಳೆಯ ಸಂಪ್ರದಾಯವಲ್ಲ. ಆದ್ದರಿಂದ ಮಾನ್ಯರೆ, ನೀವು ಒಂದುಪಕ್ಷ ಆ ತಿದ್ದುಪಡಿಗೆ ಒಪ್ಪಿಗೆಯನ್ನು ಕೊಟ್ಟಿದ್ದರೆ ನಾನು ಅದನ್ನು ವಿರೋಧಿಸುತ್ತೇನೆ.

'ವಿಭಾಗಗಳು ಮತ್ತು ಸಮಿತಿಗಳು ಸೇರಿದಂತೆ' ಎಂಬ ಶಬ್ದಗಳನ್ನು ಸೇರಿಸುವುದಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ, ಅದರ ಪರವಾಗಿ ಅಧಿಕ ಸಂಖ್ಯೆಯ ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. (ಹರ್ಷೋದ್ಗಾರ).

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಆಚಾರ್ಯ ಕೃಪಲಾನಿ ಅವರು ಒಂದು ನಿರ್ಣಯವನ್ನು ಮಂಡಿಸಿದರು. ಡಾ. ಸುರೇಶ್ ಬ್ಯಾನರ್ಜಿ ಅವರು ಅದಕ್ಕೆ ಒಂದು ತಿದ್ದುಪಡಿಯನ್ನು ಮಂಡಿಸಿದರು. ಈ ವಿಚಾರವಾಗಿ ದೀರ್ಘವಾದ ಚರ್ಚೆ ನಡೆದಿದೆ. ಈ ಪ್ರಶ್ನೆಯ ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ವಿಚಾರ ಮಾಡಲಾಗಿದೆ. ಆಚಾರ್ಯ ಕೃಪಲಾನಿ ಅವರು ತಮ್ಮ ಅಂತಿಮ ಉತ್ತರದಲ್ಲಿ ಡಾ. ಸುರೇಶ್ಚಂದ್ರ ಬ್ಯಾನರ್ಜಿ ಅವರು ಪ್ರಸ್ತಾವಿಸಿದ ತಿದ್ದುಪಡಿಯನ್ನು ಒಪ್ಪಿಕೊಂಡಿರುವುದಾಗಿ ಈಗ ಘೋಷಿಸಿದ್ದಾರೆ. ನಾನು ಈಗ ಈ ಪ್ರಸ್ತಾವವನ್ನು ಸದನದಲ್ಲಿ ಮತಕ್ಕೆ ಹಾಕುತ್ತೇನೆ.

**ಸರ್ದಾರ್ ಉಜ್ವಲ್ ಸಿಂಗ್** (ಪಂಜಾಬ್–ಸಿಖ್ಖ್) : ಅಧ್ಯಕ್ಷರಿಂದ ನಾಮನಿರ್ದೇಶನ ಅಥವಾ ಸದಸ್ಯರಿಂದ ಸಮಿತಿಗೆ ಸೇರಿಸಿಕೊಳ್ಳುವ ತಿದ್ದುಪಡಿ ಏನಾಯಿತು?

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಅದನ್ನು ಮಂಡಿಸಲಾಗಿಲ್ಲ. ಈ ಹಂತದಲ್ಲಿ ನನ್ನ ಮುಂದೆ ಇಲ್ಲದ ಪತ್ರಕ್ಕೆ ಯಾವುದೇ ತಿದ್ದುಪಡಿಯನ್ನು ಮಾಡಲು ಅನುಮತಿಸಬಲ್ಲೆ ಎಂದು ನಾನು ಭಾವಿಸಿಲ್ಲ.

ಈಗ ಸದನದ ಮುಂದಿರುವ ತಿದ್ದುಪಡಿ ಹೀಗಿದೆ: ಕಲಂ ೧(ಎ)ಯಲ್ಲಿ 'ಸಭೆಯ' ಎಂಬ ಶಬ್ದಕ್ಕೆ ಮುಂಚೆ 'ವಿಭಾಗಗಳು ಮತ್ತು ಸಮಿತಿಗಳು ಸೇರಿದಂತೆ' ಎಂಬ ಶಬ್ದಗಳನ್ನು ಸೇರಿಸಬೇಕು.

ಈ ತಿದ್ದುಪಡಿಯನ್ನು ಅಂಗೀಕರಿಸಲಾಗಿದೆ.

**ಸರ್ದಾರ್ ಉಜ್ವಲ್ ಸಿಂಗ್** : ಮಾನ್ಯರೆ, ನಾನು ಮಂಡಿಸುತ್ತೇನೆ:

"ಅದೆಂದರೆ, ೨ನೇ ಸಾಲಿನಲ್ಲಿ '೧೫ ಇತರ ಸದಸ್ಯರು' ಎಂಬ ಶಬ್ದಗಳ ಅನಂತರ 'ಸಮಿತಿಗೆ ಸೇರಿಸಿಕೊಳ್ಳುವ ಅಧಿಕಾರದೊಡನೆ' ಎಂಬ ಶಬ್ದಗಳನ್ನು ಸೇರಿಸಬೇಕು."

ಈ ತಿದ್ದುಪಡಿಯನ್ನು ಮಂಡಿಸುವಲ್ಲಿ ನನ್ನ ಉದ್ದೇಶ ಹೀಗಿದೆ : ಪ್ರಮಾಣಾನುಗುಣ ಪ್ರಾತಿನಿಧ್ಯದಲ್ಲಿ ಕೆಲವು ಪ್ರಮುಖ ಅಲ್ಪಸಂಖ್ಯಾತರು ಪ್ರತಿನಿಧಿಸಲ್ಪಡದೆ ಹೋಗಬಹುದು. ಎಲ್ಲ ಅಲ್ಪಸಂಖ್ಯಾತರಿಗೂ ಪ್ರಾತಿನಿಧ್ಯವನ್ನು ನೀಡುವ ದೃಷ್ಟಿಯಿಂದ ಆ ವಿಧಾನವನ್ನು ಒದಗಿಸಲಾಗಿದೆ ಎಂದು ಆಚಾರ್ಯ ಕೃಪಲಾನಿ ಅವರೇನೋ ಸಂತೋಷದಿಂದ ಹೇಳಿದರು. ಪ್ರಾಯಃ ಅವರು ಒಂದು ಸಂಗತಿಯನ್ನು ಲಕ್ಷಿಸಿಲ್ಲ. ಅದೆಂದರೆ ೨೧೨ ಸದಸ್ಯರಿರುವ ಸದನದಿಂದ ನೀವು ೧೫ ಜನರನ್ನು ಚುನಾಯಿಸಬೇಕು. ಒಂದು ಗುಂಪಿನಲ್ಲಿ ಕೇವಲ ನಾಲ್ಕು ಅಥವಾ ಐದು ಜನ ಸದಸ್ಯರಿದ್ದಾರೆ. ಅಂತಹ ಗುಂಪಿಗೆ ಪ್ರಾತಿನಿಧ್ಯ ಸಿಗದೇ ಹೋಗಬಹುದು. ಆ ಗುಂಪಿನ ಒಬ್ಬ ಸದಸ್ಯನಿಗೆ ಅಗತ್ಯವಾದ ಪಾಲು ಸಿಗದೇ ಹೋಗಬಹುದು ಮತ್ತು ಆ ಗುಂಪಿಗೆ ಸಮಿತಿಯಲ್ಲಿ ಒಂದು ಸ್ಥಾನವನ್ನು ಪಡೆಯುವುದು ಸಾಧ್ಯವಾಗುವುದಿಲ್ಲ. ಆ ಸಣ್ಣ ಅಲ್ಪಸಂಖ್ಯಾತರ ಗುಂಪಿಗೆ ಪ್ರಾತಿನಿಧ್ಯವನ್ನು ಕೊಡುವ ಏಕಮೇವ ಸಾಧನವೆಂದರೆ ಅಧ್ಯಕ್ಷರಿಂದ ನಾಮನಿರ್ದೇಶನ ಅಥವಾ ಸಮಿತಿಗೆ ಸೇರಿಸಿಕೊಳ್ಳುವುದು (ಕೋಆಪ್ಷನ್) ಅದನ್ನು ದೃಷ್ಟಿಯಲ್ಲಿಟ್ಟುಕೊಂಡು ನಾನು ಈ ತಿದ್ದುಪಡಿಯನ್ನು ಮಂಡಿಸುತ್ತಿದ್ದೇನೆ. ಪ್ರಾತಿನಿಧ್ಯವಿಲ್ಲದ ಕೆಲವು ಗುಂಪುಗಳ ಸದಸ್ಯರನ್ನು ಸೇರಿಸುವ ಪ್ರಶ್ನೆಯನ್ನು ಅಧ್ಯಕ್ಷರಿಗೆ ಬಿಟ್ಟರೆ ತೀರ ಸೂಕ್ತವಾಗುತ್ತದೆ ಎಂದು ನಾನು ಚಿಂತಿಸಿದೆ. ಅದು ಅಧ್ಯಕ್ಷರ ಅಧಿಕಾರವನ್ನು ವರ್ಧಿಸುತ್ತದೆ. ಆದರೆ ಅದು ಸಾಧ್ಯವಾಗದಿದ್ದರೆ ಅಥವಾ ಈ ಸದನಕ್ಕೆ ಒಪ್ಪಿಗೆಯಾಗದಿದ್ದರೆ, ಈ ಅಧಿಕಾರವನ್ನು ಸಮಿತಿಗೇ ಕೊಡಬೇಕು ಎಂದು ನಾನು ಸೂಚಿಸಲು ಬಯಸುತ್ತೇನೆ. ಪ್ರತಿನಿಧಿಸಬೇಕಾದ ವಿವಿಧ ಹಿತಾಸಕ್ತಿಗಳಿಗೆ ಪ್ರಾತಿನಿಧ್ಯವನ್ನು ಕೊಡಲು ಸಾಧ್ಯವಾಗದಿರುವ ಅನೇಕ ಸಂಸ್ಥೆಗಳಲ್ಲಿ ಇದೇ ರೀತಿಯ ವಿಧಾನವು ಅಸ್ತಿತ್ವದಲ್ಲಿದೆ. ಈ ಕೆಲವು ಮಾತುಗಳನ್ನು ಆಡಿ ನಾನು ನನ್ನ ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ : ಸಿನ್ಹ) : ಮಂಡಿಸುವವರು ಪ್ರಸ್ತಾವಿಸಿದ ತಿದ್ದುಪಡಿಯ ಅರ್ಥವೇನೆಂದರೆ ೨ನೇ ಸಾಲಿನಲ್ಲಿ 'ಸದಸ್ಯರು' ಎಂಬ ಶಬ್ದದ ಅನಂತರ 'ಸಮಿತಿಗೆ ಸೇರಿಸುವ ಅಧಿಕಾರದೊಡನೆ' ಎಂಬ ಶಬ್ದಗಳನ್ನು ಸೇರಿಸಬೇಕು.

**ಸರ್ದಾರ್ ಹರ್ನಾಮ್ ಸಿಂಗ್** (ಪಂಜಾಬ್-ಸಿಖ್) : ಮಾನ್ಯರೆ, ನಾನು ಸಲಹೆ ಮಾಡುವುದೇನೆಂದರೆ, ಅಗತ್ಯವಿದ್ದರೆ 'ಐದಕ್ಕಿಂತ ಹೆಚ್ಚಿಲ್ಲದಂತೆ' ಎಂದು ನಾವು ಸೇರಿಸಬಹುದು.

**ಸರ್ದಾರ್ ಉಜ್ವಲ್ ಸಿಂಗ್** : ನನ್ನ ತಿದ್ದುಪಡಿಗೆ ಈ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ.

**ಶ್ರೀ ಎಸ್.ಎಚ್. ಪ್ರೇಟರ್** : ಈ ತಿದ್ದುಪಡಿಯನ್ನು ನಾನು ಅನುಮೋದಿಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ತಿದ್ದುಪಡಿಗೆ ಅಧಿಸೂಚನೆಯನ್ನು ನೀಡಿರುವ ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರು ದಯವಿಟ್ಟು ಅದನ್ನು ಸಂಕ್ಷಿಪ್ತವಾಗಿ ಮಂಡಿಸುತ್ತಾರೆ.

**ಶ್ರೀ ಮೋಹನ್‌ಲಾಲ್ ಸಕ್ಸೇನಾ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ನಾನು ತಿದ್ದುಪಡಿ ಮಂಡಿಸುವುದೇನೆಂದರೆ ಪರಿಶಿಷ್ಟದ ೪ನೇ ಕಂಡಿಕೆಯಲ್ಲಿ....]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : *[ಗೌರವಾನ್ವಿತ ಸದಸ್ಯರು ಹೇಳುತ್ತಿರುವುದು ಯಾವ ಕಂಡಿಕೆ?]*

**ಶ್ರೀ ಮೋಹನ್‌ಲಾಲ್ ಸಕ್ಸೇನಾ** : *[ನಾನು ಮಂಡಿಸುವುದೇನೆಂದರೆ ೪ನೇ ಕಂಡಿಕೆಯಲ್ಲಿ 'ಅಧ್ಯಕ್ಷರು' ಎಂಬ ಶಬ್ದದ ಅನಂತರ ಮುಂದೆ ಹೇಳಿರುವುದನ್ನು ಸೇರಿಸಬಹುದು:]*

'ಸದಸ್ಯರಿಗೆ......'.

*[ಪ್ರಸ್ತುತ ಪ್ರಸ್ತಾವವು ಏನೆಂದರೆ ನಾಮನಿರ್ದೇಶಿತರಾದ ಸದಸ್ಯರ ಸಂಖ್ಯೆಯು ಚುನಾಯಿತ ಸದಸ್ಯರ ಸಂಖ್ಯೆಗಿಂತ ಕಡಮೆಯಿದ್ದರೆ, ಮತ್ತೆ ಹೊಸದಾಗಿ ನಾಮನಿರ್ದೇಶನ ಮಾಡುವುದಕ್ಕೆ ಅವಕಾಶ ಕೊಡಬೇಕು. ನಾಮನಿರ್ದೇಶಿತ ಸದಸ್ಯರ ಸಂಖ್ಯೆಯು ಖಾಲಿ ಸ್ಥಾನವನ್ನು ತುಂಬುವವರೆಗೆ ಅಥವಾ ಹೆಚ್ಚಾಗುವವರೆಗೆ ಈ ಪ್ರಕ್ರಿಯೆಯು ಮುಂದುವರಿಯಬೇಕು. ಅಂತಹ ಪ್ರಸಂಗಗಳಲ್ಲಿ ಸಾಮಾನ್ಯವಾಗಿ ಅನುಸರಿಸುವ ವಿಧಾನ ಏನೆಂದರೆ ನಾಮನಿರ್ದೇಶಿತರಾದ ಸದಸ್ಯರ ಸಂಖ್ಯೆಯಲ್ಲಿ ಕೊರತೆ ಬಿದ್ದರೆ, ಈಗಾಗಲೇ ನಾಮನಿರ್ದೇಶಿತರಾಗಿರುವ ಸದಸ್ಯರನ್ನು ಚುನಾಯಿತರಾಗಿದ್ದಾರೆಂದು ಪರಿಗಣಿಸಿ, ನಾಮನಿರ್ದೇಶಿತ ಸದಸ್ಯರ ಸ್ಥಾನಗಳಿಗಾಗಿ ಹೊಸದಾಗಿ ನಡವಳಿಗಳನ್ನು ಕೈಗೊಳ್ಳಲಾಗುತ್ತದೆ. ನನ್ನ ತಿದ್ದುಪಡಿಯ ಉದ್ದೇಶ ಇದು. ಸದನವು ಇದನ್ನು ಅಂಗೀಕರಿಸುತ್ತದೆ ಎಂದು ನಿರೀಕ್ಷಿಸುತ್ತೇನೆ. ಆಚಾರ್ಯ ಕೃಪಲಾನಿ ಅವರು ಇದಕ್ಕೆ ಸಮ್ಮತಿಸಿದ್ದಾರೆ.]*

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶ್ರೀ ಮೋಹನ್‌ಲಾಲ್ ಸಕ್ಸೇನಾ ಅವರು ಪ್ರಸ್ತಾವಿಸಿರುವ ತಿದ್ದುಪಡಿ ಏನೆಂದರೆ ಪರಿಶಿಷ್ಟದಲ್ಲಿನ ೪ನೇ ಕಂಡಿಕೆಯಲ್ಲಿ 'ಅಧ್ಯಕ್ಷರು' ಎಂಬ ಶಬ್ದದ ಅನಂತರ ಮುಂದಿನ ಶಬ್ದಗಳನ್ನು ಸೇರಿಸಬೇಕು 'ಹಾಗೆ ನಾಮನಿರ್ದೇಶಿತರಾದ ವ್ಯಕ್ತಿಗಳನ್ನು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಬೇಕು ಮತ್ತು ಉಳಿದ ಖಾಲಿ ಸ್ಥಾನಗಳಿಗೆ'. ಇದನ್ನು ಅನುಮೋದಿಸುವವರು ಯಾರಾದರೂ ಇದ್ದಾರೆಯೇ?

**ಒಬ್ಬರು ಗೌರವಾನ್ವಿತ ಸದಸ್ಯರು** : ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಅನುಮೋದಿಸುತ್ತೇನೆ. ಇದು ಮುಖ್ಯವಾದುದು ಮತ್ತು ಅವಶ್ಯಕವಾದುದು.

**ಶ್ರೀ ಎಫ್.ಆರ್. ಆಂಥನಿ** (ಬಂಗಾಳ : ಸಾಮಾನ್ಯ) : ಮಾನ್ಯರೆ, ಕೊನೆಯ ಭಾಗ ನನಗೆ ಕೇಳಿಸಲಿಲ್ಲ.

**ಮಾನ್ಯ ಅಧ್ಯಕ್ಷರು** : (ಡಾ. ಸಚ್ಚಿದಾನಂದ ಸಿನ್ಹ) : ಕೊನೆಯ ಭಾಗ ನಿಮಗೆ ಕೇಳಿಸಲಿಲ್ಲ. ಸರ್ ಬಿ.ಎನ್. ರಾವ್ ಅವರು ದಯವಿಟ್ಟು ಅದನ್ನು ಓದಿ ಹೇಳುತ್ತಾರೆ.

**ಸರ್ ಬಿ.ಎನ್.ರಾವ್** (ಸಾಂವಿಧಾನಿಕ ಸಲಹೆಗಾರರು) : ಪರಿಶಿಷ್ಟದ ೪ನೇ ಕಂಡಿಕೆಯಲ್ಲಿ 'ಅಧ್ಯಕ್ಷರು' ಎಂಬ ಶಬ್ದದ ಅನಂತರ ಮುಂದಿನ ಶಬ್ದಗಳನ್ನು ಸೇರಿಸಬೇಕು : 'ಹಾಗೆ ನಾಮ ನಿರ್ದೇಶಿತರಾದ ವ್ಯಕ್ತಿಗಳನ್ನು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಬೇಕು ಮತ್ತು ಉಳಿದ ಖಾಲಿ ಸ್ಥಾನಗಳಿಗೆ'. ತಿದ್ದುಪಡಿಯಾದ ಕಂಡಿಕೆಯನ್ನು ನಾನು ಓದಬೇಕೆಂದು ತಾವು ಅಪೇಕ್ಷಿಸಿದರೆ ಹಾಗೆ ಮಾಡಲು ನನಗೆ ಸಂತೋಷ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಹೌದು, ಸರ್ ನರಸಿಂಗ್.

**ಸರ್ ಬಿ.ಎನ್. ರಾವ್** : ತಿದ್ದುಪಡಿಯಾದ ಕಂಡಿಕೆಯು ಹೀಗಿರುತ್ತದೆ. "ಈ ರೀತಿಯಲ್ಲಿ ನಾಮನಿರ್ದೇಶಿತರಾದ ಅಭ್ಯರ್ಥಿಗಳ ಸಂಖ್ಯೆಯು ತುಂಬಬೇಕಾದ ಖಾಲಿ ಸ್ಥಾನಗಳಿಗಿಂತ ಕಡಮೆಯಾಗಿದ್ದರೆ, ಅಧ್ಯಕ್ಷರು ಹಾಗೆ ನಾಮನಿರ್ದೇಶಿತರಾದ ವ್ಯಕ್ತಿಗಳನ್ನು ಕ್ರಮಬದ್ಧವಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಬೇಕು ಮತ್ತು ಉಳಿದ ಖಾಲಿ ಸ್ಥಾನಗಳಿಗೆ ಮತ್ತಷ್ಟು ಅವಧಿಯನ್ನು ನೀಡುತ್ತಾರೆ. ಅಷ್ಟರೊಳಗೆ ಪೂರ್ವೋಕ್ತ ಅಧಿಸೂಚನೆಗಳನ್ನು ಕೊಡಬಹುದು. ಹೀಗೆ ತುಂಬಬೇಕಾದ ಖಾಲಿ ಸ್ಥಾನಗಳ ಸಂಖ್ಯೆಗಿಂತ ಅಭ್ಯರ್ಥಿಗಳ ಸಂಖ್ಯೆಯು ಕಡಮೆಯಾಗಿಲ್ಲ ಎನ್ನುವವರೆಗೆ ಹೆಚ್ಚುವರಿ ಮತ್ತಷ್ಟು ಅವಧಿಗಳನ್ನು ನಿಗದಿ ಮಾಡುತ್ತಾ ಹೋಗಬಹುದು."

**ಶ್ರೀ ಎಫ್.ಆರ್. ಆಂಥನಿ** : ಮಾಹಿತಿಗಾಗಿ ಕೇಳುತ್ತಿದ್ದೇನೆ ಮಾನ್ಯರೆ. ನನ್ನ ಸಿಕ್ಖ್ ಸಹಸದಸ್ಯರೊಬ್ಬರ ತಿದ್ದುಪಡಿಯ ಪ್ರಸ್ತಾವಕ್ಕೆ ಏನಾಯಿತು ಎಂದು ನನಗೆ ಸರಿಯಾಗಿ ತಿಳಿಯಲಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಅದನ್ನು ಅಂಗೀಕರಿಸಲಾಗಿದೆ.

**ಒಬ್ಬರು ಗೌರವಾನ್ವಿತ ಸದಸ್ಯರು** : "ಐದಕ್ಕಿಂತ ಹೆಚ್ಚಿಲ್ಲದಂತೆ ಸಮಿತಿಗೆ ಸೇರಿಸಿಕೊಳ್ಳುವ ಅಧಿಕಾರದೊಡನೆ" ಅಂಗೀಕರಿಸಲಾಗಿದೆ.

**ಆಚಾರ್ಯ ಜೆ.ಬಿ. ಕೃಪಲಾನಿ** : ಸ್ವಾಮಿ, ಇದನ್ನು ನಾನು ಅಂಗೀಕರಿಸುತ್ತೇನೋ ಅಥವಾ ಇಲ್ಲವೋ ಎಂದು ನನ್ನನ್ನು ಯಾವಾಗಲೂ ಕೇಳಲಾಗಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನಿಮ್ಮ ನಿರ್ಣಯದ ಮೇಲಿನ ತಿದ್ದುಪಡಿ ಕುರಿತು ನಿಮ್ಮನ್ನು ಯಾವಾಗಲೂ ಕೇಳಲಾಗಿಲ್ಲವೆ?

**ಆಚಾರ್ಯ ಜೆ.ಬಿ. ಕೃಪಲಾನಿ** : ತಿದ್ದುಪಡಿಯು ಸದನದ ಮುಂದೆ ಚರ್ಚೆಗೆ ಬಂದಿತೆ ಎಂದು ನನಗೆ ತಿಳಿಯದು. ಅದನ್ನು ಕೇವಲ ಮಂಡಿಸಲಾಯಿತು ಮತ್ತು ಅನುಮೋದಿಸಲಾಯಿತು. ಆದರೆ ಈ ಸದನದಲ್ಲಿ ಅದನ್ನು ಅಂಗೀಕರಿಸಲಾಗಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಸದನದ ವಿವೇಚನೆಯೊಡನೆ ಅಂಗೀಕೃತವಾಗಿದೆ.

**ಆಚಾರ್ಯ ಜೆ.ಬಿ. ಕೃಪಲಾನಿ** : ಅದಕ್ಕೂ ಕೂಡ ಆಸ್ಪದ ಕೊಡಲಾಗಿಲ್ಲ. (ಅಡ್ಡಿಗಳು)...

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶಿಸ್ತು, ಶಿಸ್ತು, ತಿದ್ದುಪಡಿಯನ್ನು ಅಂಗೀಕರಿಸಲಾಗಿದೆ.

**ಡಾ. ಪಿ.ಸಿ. ಘೋಷ್** (ಬಂಗಾಳ : ಸಾಮಾನ್ಯ) : ಸದನದ ಮುಂದೆ ಅದನ್ನು ಮತಕ್ಕೆ ಕೂಡ ಹಾಕಲಾಗಿಲ್ಲ. ಅದು ಅಂಗೀಕೃತವಾಗಿದೆ ಎಂದು ನಿಮ್ಮ ಪೀಠದಿಂದ ನೀವು ಕೇವಲ ಹೇಳುತ್ತಿದ್ದೀರಷ್ಟೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಸದನದ ಕಾರ್ಯವು ಕೆಲಮಟ್ಟಿನ ವೇಗದಲ್ಲಿ ನಡೆಯಬೇಕಾದದ್ದು ಆವಶ್ಯಕವಾಗಿದೆ. ಗೌರವಾನ್ವಿತ ಸದಸ್ಯರು ಸಾಕಷ್ಟು ಜಾಗ್ರತರಾಗಿಲ್ಲದಿದ್ದರೆ, ಅವರು ತಮಗೆ ತಾವೇ ಕೃತಜ್ಞತೆ ಹೇಳಿಕೊಳ್ಳಬೇಕಷ್ಟೆ.

ಶ್ರೀ ಮೋಹನಲಾಲ್ ಸಕ್ಸೇನಾ ಅವರ ತಿದ್ದುಪಡಿಯನ್ನು ನಾನು ಓದಿ ಹೇಳುತ್ತೇನೆ. ಈ ಬಾರಿ ಆದಂತೆ, ನಾನು ಸದನದ ವ್ಯವಹಾರಗಳನ್ನು ಗಡಿಬಿಡಿಯಿಂದ ಓಡಿಸುತ್ತಿದ್ದೇನೆ ಎಂಬ ಆರೋಪ ಮತ್ತೆ ಬರುವುದಿಲ್ಲ ಎಂದು ನಿರೀಕ್ಷಿಸುತ್ತೇನೆ. ನಾನು ಅದನ್ನು ಒಂದು ಸಲ ಓದಿದ್ದೇನೆ. ಸರ್ ಬಿ.ಎನ್. ರಾವ್ ಅವರು ಮತ್ತೊಂದು ಸಲ ಅದನ್ನು ಓದಿ ಹೇಳಿದ್ದಾರೆ. ಸದನ ಇಷ್ಟಪಟ್ಟರೆ ಅದನ್ನು ನಾನು ಮತ್ತೊಮ್ಮೆ ಓದಿ ಹೇಳುತ್ತೇನೆ. ಪರಿಶಿಷ್ಟದ ೪ನೇ ಕಂಡಿಕೆಯಲ್ಲಿ 'ಅಧ್ಯಕ್ಷರು' ಎಂಬ ಶಬ್ದದ ಅನಂತರ ಮುಂದಿನ ಶಬ್ದಗಳನ್ನು ಸೇರಿಸಬೇಕು: (ಅಡ್ಡಿಗಳು)....

ನಾನು ಸದನವನ್ನು ಉದ್ದೇಶಿಸಿ ಮಾತನಾಡುತ್ತಿರುವಾಗ ನಡುವೆ ಅಡಚಣೆ ಉಂಟುಮಾಡುವುದನ್ನು

ಇಷ್ಟ ಪಡುವುದಿಲ್ಲ. ತಿದ್ದುಪಡಿ ಹೀಗಿದೆ : "ಅಧ್ಯಕ್ಷರು ಹಾಗೆ ನಾಮನಿರ್ದೇಶಿತರಾದ ವ್ಯಕ್ತಿಗಳನ್ನು ಕ್ರಮಬದ್ಧರಾಗಿ ಚುನಾಯಿತರಾಗಿದ್ದಾರೆಂದು ಘೋಷಿಸಬೇಕು ಮತ್ತು ಖಾಲಿ ಸ್ಥಾನಗಳಿಗೆ" ಅದರ ಅರ್ಥ ಏನೇ ಆಗಿರಲಿ, ಅದೇ ತಿದ್ದುಪಡಿ. ಅದರ ಪರವಾಗಿರುವವರು ತಮ್ಮ ಒಪ್ಪಿಗೆಯನ್ನು ಈ ಪ್ರಸ್ತಾವಕ್ಕೆ ಸೂಚಿಸುವುದಕ್ಕಾಗಿ ದಯವಿಟ್ಟು ಕೈಯನ್ನು ಮೇಲಕ್ಕೆತ್ತಿ. ಶ್ರೀ ಅಯ್ಯಂಗಾರ್, ದಯವಿಟ್ಟು ಎಣಿಸುತ್ತೀರಾ?

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯರೆ, ಅದಕ್ಕೆ ಯಾರೂ ವಿರೋಧವನ್ನು ಸೂಚಿಸಿಲ್ಲ ಎಂದರೆ, ಅದರ ಅಗತ್ಯವಿಲ್ಲ.

**ಶ್ರೀ ಎಚ್.ವಿ. ಆರ್. ಅಯ್ಯಂಗಾರ್** (ಸಂವಿಧಾನ ರಚನಾಸಭೆಯ ಕಾರ್ಯದರ್ಶಿ) : ಪರವಾಗಿ ೫೦.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ವಿರುದ್ಧವಾಗಿ ಎಷ್ಟು ಜನ?

**ಶ್ರೀ ಎಚ್.ವಿ. ಕಾಮತ್** : ನಾನೊಂದು ಶಾಬ್ದಿಕ ತಿದ್ದುಪಡಿಯನ್ನು ಸಲ್ಲಿಸಿದ್ದೆ. ನಾನೂ ಅದರಲ್ಲಿ ಸೇರಿಕೊಳ್ಳಬಹುದೆ?

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನಿಮ್ಮ ಶಾಬ್ದಿಕ ತಿದ್ದುಪಡಿಗಳು ಬೇರೆಯವರ ಔಪಚಾರಿಕ ತಿದ್ದುಪಡಿಗಳಿಗಿಂತ ಅಪಾಯಕರ. ಕಲಂ ೧(ಸಿ)ಯಲ್ಲಿ 'ನೇಮಕ' ಎಂಬ ಶಬ್ದದ ಅನಂತರ 'ಕಾರ್ಯಭಾರಗಳು' ಎಂಬ ಶಬ್ದವನ್ನು ಸೇರಿಸಬೇಕೆಂದು ನೀವು ಅಪೇಕ್ಷೆಪಟ್ಟಿದ್ದೀರಿ. ಈ ಕಲಂ ಹೀಗೆ ಕಾಣುತ್ತದೆ :

"(ಸಿ) ಅಧ್ಯಕ್ಷರನ್ನು ಹೊರತು ಪಡಿಸಿ ಇತರ ಪದಾಧಿಕಾರಿಗಳ ನೇಮಕ, ಕಾರ್ಯಭಾರಗಳು ಮತ್ತು ಅಧಿಕಾರಗಳೂ ಸೇರಿದಂತೆ ಸಭೆಯ ಕೆಲಸವನ್ನು ಸಂಯೋಜಿಸುವುದು; ಮತ್ತು"

ಮತ್ತು ಕಲಂ (ಡಿ)ಯಲ್ಲಿ 'ಫಿಲ್ಲಿಂಗ್' ಎಂಬ ಶಬ್ದದ ಅನಂತರ 'ಇನ್' ಎಂಬ ಶಬ್ದವನ್ನು ಸೇರಿಸುವುದು. ದಯವಿಟ್ಟು ಮುಂದೆ ಬನ್ನಿ. ನೀವು ಸಾಮಾನ್ಯವಾಗಿ ನಿಮ್ಮ ವಿಚಾರವನ್ನು ಅತ್ಯಂತ ಸಂಕ್ಷಿಪ್ತ ಮಾತುಗಳಲ್ಲಿ ಹೇಳುವುದರಲ್ಲಿ ಯಶಸ್ವಿಯಾಗುತ್ತೀರಿ.

**ಶ್ರೀ ಎಚ್.ವಿ. ಕಾಮತ್** : ಮಾನ್ಯರೆ, ಕಲಂ (ಸಿ)ನಲ್ಲಿ 'ನೇಮಕ' ಎಂಬ ಶಬ್ದದ ಅನಂತರ 'ಕಾರ್ಯಭಾರಗಳು' ಎಂಬ ಶಬ್ದವನ್ನೂ ಸೇರಿಸಬಹುದೆಂದು ಅಪೇಕ್ಷೆಪಟ್ಟಿದ್ದೇನೆ. ಈಗ ಆ ಕಲಂ ಹೀಗೆ ಕಾಣುತ್ತದೆ : "ಅಧ್ಯಕ್ಷರನ್ನು ಹೊರತುಪಡಿಸಿ ಇತರ ಪದಾಧಿಕಾರಿಗಳ ನೇಮಕ, ಕಾರ್ಯಭಾರಗಳು ಮತ್ತು ಅಧಿಕಾರಗಳೂ ಸೇರಿದಂತೆ ಸಭೆಯ ಕೆಲಸವನ್ನು ಸಂಯೋಜಿಸುವುದು; ಮತ್ತು"

ಮುಂದಿನ ತಿದ್ದುಪಡಿಯನ್ನು ನಾನು ಮಾಡಲು ಬಯಸಿರುವುದು ಕಲಂ (ಡಿ)ಯಲ್ಲಿ. ಈ ನಿರ್ಣಯವನ್ನು ರಚಿಸಿದವರಿಗೆ ಉಚಿತ ಗೌರವವನ್ನು ಸಲ್ಲಿಸುತ್ತಾ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯರೆ, ಸರಿಯಾದ ನುಡಿಗಟ್ಟು ಎಂದರೆ 'ಫಿಲ್ಲಿಂಗ್ ಇನ್', ಆದ್ದರಿಂದ ಆ ಕಲಂ ಹೀಗಿರಬೇಕೆಂದು ಮಂಡಿಸುತ್ತೇನೆ-

"ಸಭೆಯಲ್ಲಿ ಖಾಲಿ ಸ್ಥಾನಗಳನ್ನು ಘೋಷಿಸುವುದಕ್ಕೆ ಮತ್ತು ತುಂಬುವುದಕ್ಕೆ ವಿಧಾನ;"

ಅದೇ ರೀತಿಯಲ್ಲಿ ಪರಿಶಿಷ್ಟದಲ್ಲಿಯೂ ಕೂಡ ಎಲ್ಲೆಲ್ಲಿ 'ಫಿಲ್', 'ಫಿಲ್ಡ್' ಅಥವಾ 'ಫಿಲ್ಲಿಂಗ್' ಎಂಬ ಶಬ್ದಗಳು ಬರುತ್ತವೆಯೋ ಅಲ್ಲಿ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಮತ್ತೆ ಈ ನಿರ್ಣಯವನ್ನು ರಚಿಸಿದವರಿಗೆ ಉಚಿತ ಗೌರವವನ್ನು ಸಲ್ಲಿಸುತ್ತಾ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ, ಮಾನ್ಯರೆ, 'ಫಿಲ್ಲಿಂಗ್ ಇನ್' ಎಂಬುದು ಸರಿಯಾದ ನುಡಿಗಟ್ಟು.

**ಒಬ್ಬರು ಗೌರವಾನ್ವಿತ ಸದಸ್ಯರು** : 'ಫಿಲ್ಲಿಂಗ್ ಅಪ್' ಏಕಾಗಬಾರದು?

**ಮತ್ತೊಬ್ಬರು ಗೌರವಾನ್ವಿತ ಸದಸ್ಯರು** : ನಾನು ಒಂದು ತಿದ್ದುಪಡಿಯನ್ನು ಮಾಡಲು ಬಯಸುತ್ತೇನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಶ್ರೀ ಕಾಮತ್ ಅವರ ತಿದ್ದುಪಡಿಯನ್ನು ನಾನು ಒಮ್ಮೆ ಓದಿ ಹೇಳಿದ್ದೇನೆ, ಅವರು ಅದನ್ನು ಮತ್ತೊಮ್ಮೆ ಓದಿ ಹೇಳಿದ್ದಾರೆ. ಅದನ್ನು ಕ್ರಮಬದ್ಧವಾಗಿ ಅನುಮೋದಿಸಲಾಗಿದೆ. ಅದಕ್ಕೆ ಯಾವುದಾದರೂ ಗಂಭೀರವಾದ ವಿರೋಧ ಇದೆಯೇ?

**ಶ್ರೀ ಕೆ.ಎಂ.ಮುನ್ಷಿ** : ಅದು ನಮಗೆ ಕೇಳಿಸಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನಾನು ತಕ್ಕಷ್ಟು ಗಟ್ಟಿಯಾಗಿಯೇ ಮಾತಾಡುತ್ತೇನೆ. ನಿಮಗೆ ನನ್ನ ಮಾತು ಕೇಳಿಲ್ಲ ಎಂದರೆ ನಾನು ಅದನ್ನು ಮತ್ತೊಮ್ಮೆ ಓದಿ ಹೇಳುತ್ತೇನೆ.

**ದಿವಾನ್ ಚಮನಲಾಲ್** (ಪಂಜಾಬ್ : ಸಾಮಾನ್ಯ) : ಖಾಲಿ ಸ್ಥಾನಗಳನ್ನು 'ಫಿಲ್ಲಿಂಗ್ ಇನ್' (ತುಂಬುವುದು) ಎಂಬ ನುಡಿಗಟ್ಟನ್ನು ಉಪಯೋಗಿಸುವುದಕ್ಕೆ ನನ್ನ ವಿರೋಧವಿದೆ. ಅದು ಸರಿಯೂ ಅಲ್ಲ, ಇತರ ಸಭೆಗಳು ಅಂಗೀಕರಿಸಿದ ವಿಧಾನಗಳ ನಿಯಮಗಳಲ್ಲಿ ಅದು ಕಂಡುಬರುವುದೂ ಇಲ್ಲ. ಖಾಲಿ ಸ್ಥಾನಗಳನ್ನು 'ಫಿಲ್ಲಿಂಗ್ ಆಫ್' (ತುಂಬಿಸುವುದು) ಎನ್ನುವುದು ಪರಿಪೂರ್ಣವಾಗಿ ಸರಿಯಾದುದು. ಇನ್ನು ನನ್ನ ಗೌರವಾನ್ವಿತ ಸ್ನೇಹಿತರು ಮಾಡಿದ ಇನ್ನೊಂದು ತಿದ್ದುಪಡಿಯನ್ನು, ಅಂದರೆ, 'ನೇಮಕ' ಎಂಬ ಶಬ್ದದ ಅನಂತರ 'ಕಾರ್ಯಭಾರಗಳು' ಎಂಬ ಶಬ್ದವನ್ನು ಸೇರಿಸಬೇಕು ಎಂಬುದರಲ್ಲಿ ಯಾವ ತೊಂದರೆಯೂ ಇರಲಾರದು. ಪದಾಧಿಕಾರಿಗಳ ಅಧಿಕಾರಗಳು, ಪದಾಧಿಕಾರಿಗಳ ಕಾರ್ಯಭಾರಗಳನ್ನೂ ಒಳಗೊಂಡಿರುತ್ತವೆ ಎನ್ನುವುದು ಸುಸ್ಪಷ್ಟವಾಗಿದ್ದರೂ ಹಾಗೆ ಮಾಡಬಹುದು. ಅದನ್ನು ಇನ್ನೂ ಹೆಚ್ಚು ಸ್ಪಷ್ಟಗೊಳಿಸಬೇಕೆಂಬುದು ಉದ್ದೇಶವಾಗಿದ್ದರೆ ಅದಕ್ಕೆ ಏನೂ ಆಕ್ಷೇಪವಿರಲಾರದು. 'ಫಿಲ್ಲಿಂಗ್ ಆಫ್ ವೇಕೆನ್ಸೀಸ್' (ಖಾಲಿ ಸ್ಥಾನಗಳನ್ನು ತುಂಬಿಸುವುದು) ಎಂಬುದಕ್ಕಿರುವ ಆಕ್ಷೇಪವನ್ನು ಒಪ್ಪಿಕೊಳ್ಳಲಾಗದು. ಏಕೆಂದರೆ ವ್ಯಾಕರಣ ಸಮ್ಮತವಲ್ಲದ ಮತ್ತು ನುಡಿಗಟ್ಟಿಗೆ ಸಮ್ಮತವಲ್ಲದ ಅಭಿವ್ಯಕ್ತಿಗಳೊಡನೆ ನಾವು ಕೆಲಸವನ್ನು ಪ್ರಾರಂಭಿಸುವುದು ಸರಿಯಲ್ಲ ಎಂದು ನನ್ನ ಭಾವನೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಪ್ರಸ್ತಾವವನ್ನು ಮತ್ತೊಮ್ಮೆ ಓದಬೇಕೆಂದು ಶ್ರೀ ಮುನ್ಷಿ ಅವರು ಬಯಸುತ್ತಾರೆ ಎಂದುಕೊಂಡಿದ್ದೇನೆ.

ನಿಯಮದ ಕಲಂ (ಸಿ) ಯಲ್ಲಿ 'ನೇಮಕ' ಎಂಬ ಶಬ್ದದ ಅನಂತರ 'ಕಾರ್ಯಭಾರಗಳು' ಎಂಬ ಶಬ್ದವನ್ನು ಸೇರಿಸಿ. ಆಗ ಆ ಕಲಂ ಹೀಗಾಗುತ್ತದೆ: 'ಅಧ್ಯಕ್ಷರನ್ನು ಹೊರತುಪಡಿಸಿ ಇತರ ಪದಾಧಿಕಾರಿಗಳ ನೇಮಕ, ಕಾರ್ಯಭಾರಗಳು ಮತ್ತು ಅಧಿಕಾರಗಳು.' 'ಕಾರ್ಯಭಾರಗಳು' ಎಂಬ ಶಬ್ದದ ಸೇರ್ಪಡೆಗೆ ಪ್ರಸ್ತಾವ ಮಾಡಲಾಗಿದೆ. ಅಂದರೆ 'ನೇಮಕ' ಮತ್ತು 'ಅಧಿಕಾರಗಳು' ನಡುವೆ. ಸದನದ ಮನೋಭಾವವನ್ನು ಅರ್ಥೈಸುವಲ್ಲಿ ನಾನು ತಪ್ಪು ಮಾಡಿಲ್ಲ ಎಂದು ಭಾವಿಸುವುದಾದರೆ ಅದು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಿಲ್ಲ..... ಇದು ಅಂಗೀಕೃತವಾಗಿದೆ ಎಂದು ಘೋಷಿಸುತ್ತೇನೆ.

ಕಲಂ (ಡಿ)ಯಲ್ಲಿ ಶ್ರೀ ಕಾಮತ್ ಅವರ ಎರಡನೆಯ ತಿದ್ದುಪಡಿಯೊಂದಿದೆ. 'ಫಿಲ್ಲಿಂಗ್' ಎಂಬ ಶಬ್ದದ ಅನಂತರ 'ಇನ್' ಎಂಬ ಶಬ್ದವನ್ನು ಸೇರಿಸಿ, ಆಗ ಅದು 'ಫಿಲ್ಲಿಂಗ್ ಇನ್ ಆಫ್ ವೇಕೆನ್ಸೀಸ್' (ಖಾಲಿ ಸ್ಥಾನಗಳನ್ನು ತುಂಬುವುದು) ಎಂದಾಗುತ್ತದೆ. ಇದು ತುಂಬಿಸುವ ಪ್ರಶ್ನೆ.

**ಅನೇಕ ಗೌರವಾನ್ವಿತ ಸದಸ್ಯರು** : ಇಲ್ಲ, ಇಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಸದನದ ವಿವೇಚನೆಯು ಅದಕ್ಕೆ ವಿರೋಧವಾಗಿದೆ. ಅದು ಅಂಗೀಕೃತವಾಗಿಲ್ಲ. ಇನ್ನೇನಾದರೂ ತಿದ್ದುಪಡಿಗಳಿವೆಯೇ?

**ಮಿ.ಎಚ್.ಜೆ. ಖಾಂಡೇಕರ್** (ಸಿ.ಪಿ. ಮತ್ತು ಬೇರಾರ್) : ಕಲಂ ೭ರಲ್ಲಿ 'ಅವನ' ಎಂಬ ಶಬ್ದದ ಅನಂತರ 'ಅಥವಾ ಅವಳ' ಎಂಬ ಶಬ್ದಗಳಿರಬೇಕು. ಏಕೆಂದರೆ ಈ ಸದನದಲ್ಲಿ ಸದಸ್ಯೆಯರು ಇದ್ದಾರೆ ಹಾಗೂ ಅವರ ಬಗೆಗೆ ಏನನ್ನೂ ಪ್ರಸ್ತಾವ ಮಾಡಲಾಗಿಲ್ಲ. 'ಸದಸ್ಯ' ಎಂಬ ಶಬ್ದವು ಇಲ್ಲಿ ಸದಸ್ಯೆಯರು ಇಲ್ಲ ಎಂಬ ಅಭಿಪ್ರಾಯವನ್ನು ಕೊಡುತ್ತದೆ. ಆದ್ದರಿಂದ 'ಅವನು' ಎಂಬ ಶಬ್ದದ ಅನಂತರ 'ಅಥವಾ ಅವಳು' ಎಂದೂ 'ಅವನ' ಎಂಬ ಶಬ್ದದ ಅನಂತರ 'ಅಥವಾ ಅವಳ' ಎಂದೂ ಇರಬೇಕು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಇಲ್ಲಿ ತಿದ್ದುಪಡಿ ಮಾಡಲು ಕೋರಲಾಗಿರುವ ಪ್ರಸ್ತಾವವು ಏನೆಂದರೆ 'ಅವಳು' ಎಂಬ ನಿರ್ದಿಷ್ಟ ಶಬ್ದವನ್ನು ಉಪಯೋಗಿಸುವ ಮೂಲಕ ಈ ಸದನದ

ಸದಸ್ಯೆಯರಿಗೆ ಸಂಬಂಧ ಪಟ್ಟಂತೆ ನಮ್ಮ ನಿಲುವನ್ನು ನಾವು ಸ್ಪಷ್ಟ ಪಡಿಸಬೇಕು. ನನ್ನ ನಿರ್ಣಯ ಏನೆಂದರೆ 'ಅವನು' ಎಂಬ ಶಬ್ದವು 'ಅವಳು' ಎನ್ನುವುದನ್ನೂ ಒಳಗೊಳ್ಳುತ್ತದೆ.

**ಗೌರವಾನ್ವಿತ ಪಂಡಿತ್ ಜವಾಹರಲಾಲ್ ನೆಹರು** : ಮಾನ್ಯರೆ, ಈ ನಿರ್ಣಯವನ್ನು ಇಡಿಯಾಗಿ ಮತಕ್ಕೆ ಹಾಕಲಾಗಿಲ್ಲ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನಾನು ಹೇಳುತ್ತಾ ಇದ್ದದ್ದು ಅದೇ. ತಿದ್ದುಪಡಿಗಳು ಈಗ ಇತ್ಯರ್ಥವಾಗಿರುವುದರಿಂದ, ನಾನು ಮತಕ್ಕೆ ಹಾಕುತ್ತೇನೆ. ಆದರೆ ಈ ದೀರ್ಘ ನಿರ್ಣಯವನ್ನು ಮತ್ತೆ ಎರಡನೆಯ ಬಾರಿ ಓದುವುದಿಲ್ಲ. ಆಚಾರ್ಯ ಕೃಪಲಾನಿ ಅವರು ಇಷ್ಟ ಪಟ್ಟರೆ ಮತ್ತೆ ಓದಬಹುದು. ನಾವು ಇವುಗಳನ್ನು ಪೂರ್ಣವಾಗಿ ಚರ್ಚೆ ಮಾಡಿದ್ದೇವೆ. ಇಲ್ಲಿ ಮಾಡಲಾದ ಎಲ್ಲ ತಿದ್ದುಪಡಿಗಳೊಡನೆ ಅದು ಅಂಗೀಕೃತವಾಗಿದೆ ಎಂದು ನಾನು ಘೋಷಿಸುತ್ತೇನೆ.

### ಅಧ್ಯಕ್ಷರು ಮತ್ತು ಸಮಿತಿಯ ನಾಮನಿರ್ದೇಶನಗಳಿಗೆ ಸಂಬಂಧಿಸಿದಂತೆ ಪ್ರಕಟಣೆ

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಇಂದು ನಾನು ಎರಡು ಪ್ರಕಟಣೆಗಳನ್ನು ಮಾಡಬೇಕಾಗಿದೆ. ಮೊದಲನೆಯದಾಗಿ ಈ ಸಮಿತಿಗೆ ನಾಮನಿರ್ದೇಶನಗಳು. ಅವನ್ನು ಡಿಸೆಂಬರ್ ೧೧ನೇ ತಾರೀಖು ಅಪರಾಹ್ನ ೧೨ ಗಂಟೆಯೊಳಗೆ ಕಾರ್ಯದರ್ಶಿಗಳ ಕೋಣೆಯಲ್ಲಿ (ಶ್ರೀ ಅಯ್ಯಂಗಾರರ ಕೋಣೆ) ಸಲ್ಲಿಸಬೇಕು. ಎಲ್ಲ ನಾಮನಿರ್ದೇಶನಗಳನ್ನು ಕೊನೆಯೆಂದರೆ ನಾಳೆ ಮಧ್ಯಾಹ್ನ ೧೨ ಗಂಟೆಯೊಳಗೆ ಸಲ್ಲಿಸಬೇಕು. ಚುನಾವಣೆಯ ದಿನಾಂಕ ಮತ್ತು ಸಮಯವೆಂದರೆ ನಾಳೆ ಅಪರಾಹ್ನ ೪ ಘಂಟೆಗೆ ಅಧೀನ ಕಾರ್ಯದರ್ಶಿ ಅವರ ಕೋಣೆಯಲ್ಲಿ ಒಂದು ಉದ್ದೇಶಕ್ಕೆ ಕಾರ್ಯದರ್ಶಿಯವರ ಕೋಣೆ, ಇನ್ನೊಂದು ಉದ್ದೇಶಕ್ಕೆ ಅಧೀನ ಕಾರ್ಯದರ್ಶಿಯವರ ಕೋಣೆಯನ್ನು ಏಕೆ ಗೊತ್ತು ಮಾಡಲಾಗಿದೆಯೋ ನನಗೆ ತಿಳಿಯದು. ಮತಪೆಟ್ಟಿಗೆಗಳು ಅಲ್ಲಿರುತ್ತವೆ. ಆ ಸಮಯದಲ್ಲಿ ನಾನು ಅಲ್ಲಿರುವುದಿಲ್ಲ. ಶ್ರೀ ಆಂಥನಿ ನನ್ನ ಪರವಾಗಿ ಕೃಪೆಯಿಟ್ಟು ಅಲ್ಲಿ ಹಾಜರಿರುತ್ತಾರೆ.

ನಾನು ಮಾಡಬೇಕಾಗಿರುವ ಇನ್ನೊಂದೇ ಪ್ರಕಟಣೆ ಎಂದರೆ ಶಾಶ್ವತ ಅಧ್ಯಕ್ಷರ ಸ್ಥಾನಕ್ಕೆ ನಾಮ ನಿರ್ದೇಶನಗಳನ್ನು ಕುರಿತು. ಆ ಉದ್ದೇಶಕ್ಕಾಗಿ ನಾಮನಿರ್ದೇಶನಗಳನ್ನು, ಅಂದರೆ ಶಾಶ್ವತ ಅಧ್ಯಕ್ಷರ ಚುನಾವಣೆಗಾಗಿ, ಸಲ್ಲಿಸಲು ಇಂದು ಅಪರಾಹ್ನ ೨-೩೦ ಗಂಟೆಗೆ ಕಾರ್ಯದರ್ಶಿಯವರ ಕೋಣೆಯಲ್ಲಿ ಎಂದು ಸಮಯ ನಿಗದಿ ಮಾಡಲಾಗಿದೆ. ಚುನಾವಣೆಯು ಅಗತ್ಯವಾದರೆ ಅದಕ್ಕಾಗಿ ಏರ್ಪಾಡುಗಳನ್ನು ಮಾಡಲಾಗುವುದು. ಇಲ್ಲಿಗೆ ನಮ್ಮ ಇಂದಿನ ಕಾರ್ಯ ಮುಕ್ತಾಯವಾಯಿತು. ಅಪರಾಹ್ನ ಏನೂ ಕೆಲಸವಿಲ್ಲ.

**ಶ್ರೀ ಶರತ್‌ಚಂದ್ರ ಬೋಸ್** (ಬಂಗಾಳ : ಸಾಮಾನ್ಯ) : ಒಬ್ಬ ಶಾಶ್ವತ ಅಧ್ಯಕ್ಷರ ನಾಮನಿರ್ದೇಶನಕ್ಕೆ ಸಂಬಂಧಪಟ್ಟಂತೆ ನಿರ್ಣಯವು ಹೇಳುವುದೇನೆಂದರೆ ನಾಮನಿರ್ದೇಶನ ಪತ್ರವನ್ನು ನಿಮಗೆ ಅಥವಾ ನೀವು ನೇಮಿಸುವ ವ್ಯಕ್ತಿಗೆ ತಲುಪಿಸಬೇಕು.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ನಾಮನಿರ್ದೇಶನ ಪತ್ರಗಳನ್ನು ಸ್ವೀಕರಿಸಲು ಕಾರ್ಯದರ್ಶಿ ಶ್ರೀ ಅಯ್ಯಂಗಾರ್ ಅವರನ್ನು ನಾನು ನೇಮಕ ಮಾಡಿದ್ದೇನೆ.

**ಭಕ್ಷಿ ಸರ್ ಟೇಕ್‌ಚಂದ್** : ೨-೩೦ರ ವರೆಗೆ ಇಂದೋ ಅಥವಾ ನಾಳೆಯೋ?

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಇಂದು. ಈಗ ಇನ್ನೂ ಒಂದು ಗಂಟೆಯಾಗಿದೆ. ನಾಮ ನಿರ್ದೇಶನ ಮಾಡಲು ಒಂದೂವರೆ ಘಂಟೆ ಸಮಯ ಉಳಿದಿದೆ. ಹಿಂಪಡೆಯುವ ಸಮಯ ಇಂದು ಅಪರಾಹ್ನ ೨ ಗಂಟೆಗೆ ನಾಳೆ ಸದನವು ನಿಮ್ಮ ಅನುಕೂಲಕ್ಕೆ ತಕ್ಕಂತೆ ಬೆಳಗ್ಗೆ ಹನ್ನೊಂದು ಗಂಟೆಗೆ ಅಥವಾ ಹನ್ನೊಂದೂವರೆಗೆ ಸೇರುತ್ತದೆ.

**ಅನೇಕ ಗೌರವಾನ್ವಿತ ಸದಸ್ಯರು** : ಬೆಳಗ್ಗೆ ಹನ್ನೊಂದು ಗಂಟೆಗೆ.

**ಮಾನ್ಯ ಅಧ್ಯಕ್ಷರು** (ಡಾ. ಸಚ್ಚಿದಾನಂದ ಸಿನ್ಹ) : ಈ ಸದನವನ್ನು ೧೯೪೬ನೇ ಇಸವಿ ಡಿಸೆಂಬರ್

೧೧ನೇ ತಾರೀಖು ಬುಧವಾರ ಬೆಳಗ್ಗೆ ೧೧ ಗಂಟೆವರೆಗೆ ಮುಂದೂಡಲಾಗಿದೆ.

ಅನಂತರ ಸಭೆಯನ್ನು ೧೯೪೬ನೇ ಇಸವಿ ಡಿಸೆಂಬರ್ ೧೧ನೇ ತಾರೀಖು ಬುಧವಾರ ಬೆಳಗ್ಗೆ ೧೧ ಗಂಟೆವರೆಗೆ ಮುಂದೂಡಲಾಯಿತು.

*[] ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.